ಸಂಪುಟ 01 | ಸಂಚಿಕೆ 73 | ಭಾನುವಾರ 25 ಜನವರಿ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

MA ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

REGIONAL KANNADA DAILY MORNING

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ರಾಷ್ಟ್ರೀಯ ಮತದಾರರ ದಿನ

ಚುನಾವಣಾ ಪ್ರಕ್ರಿಯೆಯಲ್ಲಿ ಯುವಕರು ಮತದಾನದಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಲು ಜನವರಿ 25 ರಂದು ರಾಷ್ಟ್ರೀಯ ಮತದಾರರ ದಿನವನ್ನು ಆಚರಿಸಲಾಗುತ್ತದೆ. ಇದು ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಲು ಯುವಕರನ್ನು ಪ್ರೋತ್ಸಾಹಿಸುವುದಲ್ಲದೆ, ಮತದಾನದ ಹಕ್ಕು ಮೂಲಭೂತ ಹಕ್ಕು ಎಂಬ ಅಂಶದ ಮೇಲೆ ಕೇಂದ್ರೀಕರಿಸುತ್ತದೆ. ರಾಷ್ಟ್ರೀಯ ಮತದಾರರ ದಿನದ ಇತಿಹಾಸ, ಮಹತ್ವ, ಉಲ್ಲೇಖಗಳು, ಥೀಮ್ ಮತ್ತು ಭಾರತದಲ್ಲಿ ಅದನ್ನು ಏಕೆ ಆಚರಿಸಲಾಗುತ್ತದೆ ಎಂಬುದರ ಕುರಿತು ತಿಳಿಯಿರಿ.

## ಸುಭಾಷಿತ

ಸೋಲು ಎಂಬ ರೋಗವನ್ನು ನಾಶ ಮಾಡಲು,
ಆತ್ಮವಿಶ್ವಾಸ ಮತ್ತು ಕಠಿಣ ಪರಿಶ್ರಮವೇ
ಉತ್ತಮವಾದ ಮದ್ದು.

–ಎ.ಪಿ.ಜೆ. ಅಬ್ದುಲ್ ಕಲಾಂ

# ಪರೀಕ್ಷೆಯಲ್ಲಿ ಅತಿಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಬದಲು ನಗದು ಬಹುಮಾನ

**ಬೆಂಗಳೂರು: ಸರಕಾರಿ ಶಾಲೆಗಳಲ್ಲಿ ಓದಿ 2024–25ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತಿಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸುವ ಬದಲಾಗಿ ವಿದ್ಯಾರ್ಥಿಗಳ ಖಾತೆಗೆ ಹಣ ಸಂದಾಯ ಮಾಡುವಂತೆ ಶಾಲಾ ಮತ್ತು ಸಾಕ್ಷರತಾ ಇಲಾಖೆ ಸುತ್ತೋಲೆ ಹೊರಡಿಸಿ ಸೂಚನೆ ನೀಡಿದೆ.**

ಈ ಪ್ರಕಾರ ಪ್ರತಿ ಜಿಲ್ಲೆಯಲ್ಲಿ ಅಗ್ರ ಸ್ಥಾನ ಪಡೆದ ಟಾಪ್–3 ವಿದ್ಯಾರ್ಥಿಗಳ ಆಧಾರ್ ಲಿಂಕ್?ಡ ಖಾತೆಗೆ ನೇರ ನಗದು ವರ್ಗಾವಣೆ ಮಾಡಲಾಗುತ್ತದೆ. ನಗದು ಬಹುಮಾನವು ಪ್ರತಿ ವಿದ್ಯಾರ್ಥಿಗೆ 50,000 ರೂ. ಆಗಿರಲಿದೆ. 2024–25ನೇ ಶೈಕ್ಷಣಿಕ ವರ್ಷದಲ್ಲಿ 758 ವಿದ್ಯಾರ್ಥಿಗಳು ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್ ಮೂಲಕ ನಗದು ಬಹುಮಾನಕ್ಕೆ ಅರ್ಹರಾಗಿದ್ದಾರೆ.

ಗುಣಮಟ್ಟ ಭರವಸೆ ಮತ್ತು ವಿದ್ಯಾರ್ಥಿ ಪ್ರೇರಣಾ ಕಾರ್ಯಕ್ರಮದಡಿ ಅತಿಹೆಚ್ಚು ಅಂಕ ಪಡೆದ ಪ್ರತಿ ತಾಲ್ಲೂಕಿನ ಮೂವರು ವಿದ್ಯಾರ್ಥಿಗಳು ಹಾಗೂ ಪ್ರತಿ



ಜಿಲ್ಲೆಯಲ್ಲಿಅತಿ ಹೆಚ್ಚು ಅಂಕ ಪಡೆದ ಮೂವರು ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಲು ಕಳೆದ ವರ್ಷ ಸರಕಾರ ಅನುಮೋದನೆ ನೀಡಿತ್ತು. ಈಗ ವಿದ್ಯಾರ್ಥಿಗಳಿಗೆ ನೀಡಲು ಮೀಸಲಿಡಲಾಗಿದ್ದ 3.25 ಕೋಟಿ ರೂ.ಗಳನ್ನು ಒಟ್ಟು 758 ವಿದ್ಯಾರ್ಥಿಗಳಿಗೆ ತಲಾ 50 ಸಾವಿರ ರೂ.ನಂತೆ ವಿತರಿಸಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಅಧೀನ ಕಾರ್ಯದರ್ಶಿ(ಯೋಜನೆ) ಶುಭಮಂಗಳಾ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್(–ಎಸ್‌ಎಸ್‌ಪಿ) ಮೂಲಕ ವಿದ್ಯಾರ್ಥಿಗಳ ಆಧಾರ್‌ಸಂಖ್ಯೆ ಜೋಡಣೆಯಾಗಿರುವ ಬ್ಯಾಂಕ್ ಖಾತೆಗೆ ಹಣವನ್ನು ಡಿಬಿಟಿ ಮೂಲಕ ವಿತರಿಸುವಂತೆ ಸೂಚಿಸಲಾಗಿದ್ದು, ಕೊರತೆಯಾಗುವ ಅನುದಾನವನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯ ಸ್ವಂತ ಮೂಲಗಳಿಂದ ಭ–ರಿಸುವಂತೆಯೂ ನಿರ್ದೇಶಿಸಲಾಗಿದೆ.

ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ನೀಡುವ ಬದಲು ಹಣ ಸಂದಾಯ ಮಾಡುವಂತೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು. 2025ರ ನ.14ರ ಮಕ್ಕಳ ದಿನಾಚರಣೆಯಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದರು.

2ನೇ ಪುಟಕ್ಕೆ

## ರಾಷ್ಟ್ರೀಯ ಮಟ್ಟಕ್ಕೆ ಆಯ್ಕೆಯಾದ ಮಲ್ಲಿಕಾರ್ಜುನ

❑ ನೈಜ್ಯ ದೇಸೆ ನ್ಯೂಸ್

**ಸಿಂಧನೂರು: ತಾಲೂಕಿನ ರೌಡಕುಂದಾ ಗ್ರಾಮದ ಸರಕಾರಿ ಶಾಲೆಯ ವಿದ್ಯಾರ್ಥಿ ಖೋ–ಖೋ ಕ್ರೀಡಾಪಟು ಮಲ್ಲಿಕಾರ್ಜುನ ರವರು ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ ರಾಜ್ಯ ಮಟ್ಟದಿಂದ ರಾಷ್ಟ್ರೀಯ ಮಟ್ಟಕ್ಕೆ ಆಯ್ಕೆಯಾಗಿದ್ದು.**



ಎಂ ಎಲ್ ಸಿ ಬಸನಗೌಡ ಬಾದರ್ಲಿ ಮುಂದಿನ ಕ್ರೀಡಾಪ್ರೋತ್ಸಾಹವಾಗಿ ವೈಯಕ್ತಿಕ ರೂ 50,000 ಗಳನ್ನು ಧನಸಹಾಯ ಮಾಡುವ ಮೂಲಕ ಅಭಿನಂದಿಸಿಲಾಯಿತು. ಈ ವೇಳೆ ಚಂದ್ರಶೇಖರ್ ರವುಡಕುಂದ , ಕನಕಪ್ಪ, ಶಮೀದಸಬ್, ಸದ್ದಾಂ, ಬಸವರಾಜ, ಕೊನಪ್ಪ, ಯಂಕೋಬ, ಹಾಗೂ ಇತರರು ಉಪಸ್ಥಿತರಿದ್ದರು.

## ಬಳಗಾನೂರಿನಲ್ಲಿ ಬಸವೇಶ್ವರ ಸಂಯುಕ್ತ ಪ್ರೌಢ ಶಾಲೆಯ ಹಳೆಯ ವಿದ್ಯಾರ್ಥಿಗಳಿಂದ ಶಿಕ್ಷಕರಿಗೆ ಭವ್ಯ ಗುರುವಂದನಾ ಮೆರವಣಿಗೆ



❑ ನೈಜ್ಯ ದೇಸೆ ನ್ಯೂಸ್

**ಬಳಗಾನೂರು: ಬಳಗಾನೂರಿನ ಬಸವೇಶ್ವರ ಸಂಯುಕ್ತ ಪ್ರೌಢ ಶಾಲೆಯ 2005?06ನೇ ಸಾಲಿನ 7ನೇ ತರಗತಿ ಹಾಗೂ ಎಸ್‌ಎಸ್–ಎಲ್‌ಸಿ ವಿದ್ಯಾರ್ಥಿಗಳಿಂದ ಗುರುವಂದನಾ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮವನ್ನು ಅತ್ಯಂತ ಭಕ್ತಿಭಾವ, ಗೌರವ ಮತ್ತು ಸಂಭ್ರಮದಿಂದ ಆಯೋಜಿಸಲಾಯಿತು.**

ಈ ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿ ಶಿಕ್ಷಕರಿಗೆ ಗೌರವ ಸಲ್ಲಿಸುವ ಉದ್ದೇಶದಿಂದ ಮಾರುತಿ ದೇವಸ್ಥಾನದಿಂದ ಶಂಕರದೇವರ ಮಠದವರೆಗೆ ಭವ್ಯ ಮೆರವಣಿಗೆ ನಡೆಸಲಾಯಿತು. ಹಳೆಯ ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಶಿಸ್ತು, ವಿದ್ಯೆ, ಸಂಸ್ಕಾರ ಹಾಗೂ ಮಾರ್ಗದರ್ಶನ ನೀಡಿದ ಗುರುಗಳಿಗೆ ಕೃತಜ್ಞತೆ ಸಲ್ಲಿಸುವ ಸಂಕಲ್ಪದೊಂದಿಗೆ ಈ ಮೆರವಣಿಗೆಯನ್ನು ಆಯೋಜಿಸಿದರು. ಮೆರವಣಿಗೆಯಲ್ಲಿ ಶಿಕ್ಷಕರನ್ನು ಸಾಂಪ್ರದಾಯಿಕ ಪೇಟ, ಶಾಲು, ಹಾರ ಹಾಗೂ ಪುಷ್ಪಮಾಲೆಗಳಿಂದ ಗೌರವಿಸಿ, ಸುಂದರವಾಗಿ ಅಲಂಕರಿಸಿದ ತೆರೆದ ವಾಹನದಲ್ಲಿ ಪಟ್ಟಣದ ಪ್ರಮುಖ ಬೀದಿಗಳ ಮೂಲಕ ಕರೆತರಲಾಯಿತು. ಮೆರವಣಿಗೆಯು ಪಟ್ಟಣದಾದ್ಯಂತ ಗಮನ ಸೆಳೆಯುತ್ತಾ ಸಾಗಿದ್ದು, ಜನಸಾಮಾನ್ಯರು ರಸ್ತೆ ಎರಡೂ ಬದಿಗಳಲ್ಲಿ ನಿಂತು ಶಿಕ್ಷಕರಿಗೆ ಗೌರವ ಸಲ್ಲಿಸಿದರು. ಮೆರವಣಿಗೆಯ ವೇಳೆ ಹಳೆಯ ವಿದ್ಯಾರ್ಥಿಗಳು "ಗುರುವೇ ಬ್ರಹ್ಮ, ಗುರುವೇ ವಿಷ್ಣು" ಹಾಗೂ "ಗುರುಗಳೇ ನಮ್ಮ ಜೀವನದ ದೀಪ" ಎಂಬ ಘೋಷಣೆಗಳನ್ನು ಕೂಗಿ, ಶಿಕ್ಷಕರ ಮಹತ್ವವನ್ನು ಸಾರಿದರು. ಈ ದೃಶ್ಯವು ಗುರು?ಶಿಷ್ಯ ಪರಂಪರೆಯ ಮೌಲ್ಯವನ್ನು ಮತ್ತೊಮ್ಮೆ ಸ್ಮರಿಸುವಂತಿತ್ತು.

## ಮುಂಡರಗಿ ಸಿಪಿಐಯ್ ಯಶವಂತ ಬಿಸನಳ್ಳಿ ಇವರಿಗೆ ಸನ್ಮಾನ



❑ ನೈಜ್ಯ ದೇಸೆ ನ್ಯೂಸ್

**ಗದಗ: ಜಿಲ್ಲೆಯ ಮುಂಡರಗಿ ಪಟ್ಟಣದ ಪೋಲೀಸ್ ಠಾಣೆಗೆ ನೂತನ ಆರಕ್ಷಕ ವೃತ್ತ ನಿರೀಕ್ಷಕರಾಗಿ ಅಧಿಕಾರ ವಹಿಸಿಕೊಂಡ ಯಶವಂತ ಬಿಸನಳ್ಳಿ ಇವರಿಗೆ ಸನ್ಮಾನಿಸಲಾಯಿತು.**

ವಿಶ್ವ ಕನ್ನಡ ರಕ್ಷಣಾ ವೇದಿಕೆಯ ಜಿಲ್ಲಾಧ್ಯಕ್ಷ ಎಮ್.ಕೆ.ಕೆಳಗಡೆ ಇವರ ನೇತೃತ್ವದಲ್ಲಿ ಮುಂಡರಗಿ ತಾಲೂಕು ಘಟಕದ ಪದಾಧಿಕಾ–ರಿಗಳು ನೂತನ ಸಿಪಿಐಯ್ ಯಶವಂತ ಬಿಸನಳ್ಳಿ ಇವರಿಗೆ ಸನ್ಮಾನಿಸಿ ಗೌರವಿಸುವ ಮೂಲಕ ಶುಭ ಕೋರಿದರು. ಈ ಸಂದರ್ಭದಲ್ಲಿ ಮಾತನಾಡಿದ ವಿಶ್ವ ಕನ್ನಡ ರಕ್ಷಣಾ ವೇದಿಕೆಯ ಜಿಲ್ಲಾಧ್ಯಕ್ಷ ಎಮ್.ಕೆ.ಕೆಳಗಡೆ, ಇತ್ತೀಚಿಗೆ ಮುಂಡರಗಿ ತಾಲೂಕಿನ ವ್ಯಾಪ್ತಿಯಲ್ಲಿ ಹಲವು ಗ್ರಾಮಗಳಲ್ಲಿ ಅಕ್ರಮ ಚಟುವಟಿಕೆಗಳು ನಡೆಯುತ್ತಿದ್ದು ಇವುಗಳ ನಿಯಂತ್ರಣಕ್ಕೆ ಕ್ರಮ ವಹಿಸಬೇಕು. ಈ ವಿಚಾರವಾಗಿ ನಾವು ಪೋಲೀಸ್ ಇಲಾಖೆಗೆ ಸಹಕಾರ ನೀಡುವುದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ವಿಶ್ವ ಕನ್ನಡ ರಕ್ಷಣಾ ವೇದಿಕೆಯ ಮುಂಡರಗಿ ತಾಲೂಕು ಘಟಕದ ಎಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

ವರದಿ: ಚಂದ್ರಶೇಖರ ಸೋಮಣ್ಣವರ

## ಮಲ್ಲಿಕಾರ್ಜುನ್ ಪಾಟಿಲ್ ಯದ್ದಲದಿನ್ನಿ ದತ್ತಿ ದಾನಿಗಳಿಂದ ಶಾಲಾ ಮಕ್ಕಳಿಗೆ ಸಮವಸ್ತ್ರ ವಿತರಣೆ

❑ ನೈಜ್ಯ ದೇಸೆ ನ್ಯೂಸ್

**ಮಸ್ಕಿ: ತಾಲೂಕಿನ ಹಾಲಾಪೂರದ ಸರಕಾರಿ ಪ್ರೌಢಶಾಲೆಯ ದತ್ತಿ ದಾನಿಗಳಾದ ಮಲ್ಲಿಕಾರ್ಜುನ ಪಾಟೀಲ್ ಯದ್ದಲದಿನ್ನಿ ಇವರಿಂದ ಎಲ್ಲಾ ವಿದ್ಯಾರ್ಥಿಗಳಿಗೆ ಸಮವಸ್ತ್ರಗಳಾದ ಟೀ ಶರ್ಟ್ ಮತ್ತು ಲೋಯರ್ ವಿತರಣೆ ಮಾಡಿ ಮಾತನಾಡುತ್ತಾ ವಿದ್ಯಾರ್ಥಿಗಳು ತಮ್ಮ ಶಿಕ್ಷಣ ಕಲಿಕಾಮಟ್ಟವನ್ನು ಸುಧಾರಿಸಿಕೊಳ್ಳಬೇಕು,**

ಇದು ಸ್ಪರ್ಧಾ ಪ್ರಪಂಚ ಶಿಕ್ಷಕರು ಹೇಳುವ ಪಾಠವನ್ನ ಸರಿಯಾಗಿ ಆಲಿಸಬೇಕು, ಮನೆಯಲ್ಲಿ ಯಾವುದೇ ಟಿವಿ ಮೊಬೈಲ್ ಇವುಗಳಿಂದ ದೂರವಿದ್ದು ಅತ್ಯುತ್ತಮ ಅಭ್ಯಾಸ ಮಾಡಿ ಎಸ್ ಎಸ್ ಎಲ್ ಸಿ ತಮ್ಮ ಜೀವನಕ್ಕೆ ಮಹತ್ವದ ಘಟ್ಟ ಹೀಗಾಗಿ ಒಳ್ಳೆಯ ಫಲಿತಾಂಶ



ತೆಗೆದುಕೊಳ್ಳಬೇಕು, ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ 600 ಕ್ಕೂ ಹೆಚ್ಚು ಅಂಕಗಳಿಸುವ ಎಲ್ಲಾ ವಿದ್ಯಾರ್ಥಿಗಳಿಗೆ ಪಿಯುಸಿ ವಿಜ್ಞಾನ ವಿಭಾಗದ ಪ್ರವೇಶಾತಿ ಕೊಡಿಸಿ, ಕಾಲೇಜಿನ ಎಲ್ಲಾ ಶುಲ್ಕವನ್ನು ನಾನೇ ಬರಿಸುತ್ತೇನೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಮಾಜಿ ತಾಲೂಕು ಪಂಚಾಯತಿ ಸದಸ್ಯ ಬಸಪ್ಪ ಜಂಗಮರಳ್ಳಿ, ಬಸವರಾಜಗೌಡ ಎಮ್ಮಿಗನೂರು, ಸಿದ್ದಾರ್ಥ ಪೊ. ಪಾಟೀಲ್ ಹಳೆ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ , ಯಂಕಪ್ಪ ಮಡಿವಾಳ ಎಸ್ ಡಿ ಎಂ ಸಿ ಸದಸ್ಯ, ಶಾಲಾ ಮುಖ್ಯಗುರು ಸುಭಾಷ್ ಸಿಂಗ್ ಹಜಾರೆ ಹಾಗೂ ಶಿಕ್ಷಕ ವೃಂದ ಇದ್ದರು.

## ಸಾಮೂಹಿಕ 121 ವಿವಾಹ ಕಾರ್ಯಕ್ರಮ ಯಶಸ್ವಿಗೆ ಸೈಯದ್ ಅಕ್ಟರ್ ಪಾಷಾ ಹುಸೇನಿ ಅವರಿಗೆ ಭವ್ಯ ಸನ್ಮಾನ

❑ ನೈಜ್ಯ ದೇಸೆ ನ್ಯೂಸ್

**ಮಾನವಿ: ಜ.18ರಂದು ಮಾನ್ವಿ ಪಟ್ಟಣದಲ್ಲಿ ದಾರುಸ್ಸಲಾಂ ಫೌಂಡೇಶನ್ ಟ್ರಸ್ಟ್ ವತಿಯಿಂದ ಹಮ್ಮಿಕೊಳ್ಳಲಾದ 121 ಜೋಡಿಗಳ ಸಾಮೂಹಿಕ ವಿವಾಹ ಕಾರ್ಯಕ್ರಮವು ಅಪೂರ್ವ ಯಶಸ್ಸು ಕಂಡಿದ್ದು, ಈ ಮಾನವೀಯ ಕಾರ್ಯವನ್ನು ಅತ್ಯಂತ ಸಮರ್ಪಕವಾಗಿ ಸಂಘಟಿಸಿ ಯಶಸ್ವಿಗೊಳಿಸಿದ ಸಮಾಜಸೇವಕ ಹಾಗೂ ಸಂಘಟಕ ಸೈಯದ್ ಅಕ್ಟರ್ ಪಾಷಾ ಹುಸೇನಿ ಅವರಿಗೆ ರಾಯಚೂರು ನಗರದ ಅಭಿಮಾನಿಗಳು ಭವ್ಯವಾಗಿ ಸನ್ಮಾನಿಸಿದರು.**

ಬಡ, ಹಿಂದುಳಿದ, ಆರ್ಥಿಕವಾಗಿ ದುರ್ಬಲ ಹಾಗೂ ಮಧ್ಯಮ ವರ್ಗದ ಕುಟುಂಬಗಳ ಯುವಕ ಯುವತಿಯರಿಗೆ ವಿವಾಹದ ಭಾರ ಕಡಿಮೆ ಮಾಡುವ ಉದ್ದೇಶದಿಂದ ಆಯೋಜಿಸಲಾದ ಈ ಸಾಮೂಹಿಕ ವಿವಾಹ ಕಾರ್ಯಕ್ರಮವು ಜಿಲ್ಲೆಯಲ್ಲೇ ಮಾದರಿ ಕಾರ್ಯಕ್ರಮವಾಗಿ ಹೊರಹೊಮ್ಮಿದೆ. ರಾಯಚೂರು, ಮಾನ್ವಿ, ಸಿಂಧನೂರು ಸೇ–ರಿದಂತೆ ವಿವಿಧ ತಾಲ್ಲೂಕುಗಳಿಂದ ಸಾವಿರಾರು



ಜನರು ಆಗಮಿಸಿ, ನವದಂಪತಿಗಳಿಗೆ ಆಶೀರ್ವಾದ ನೀಡಿ ಕಾರ್ಯಕ್ರಮಕ್ಕೆ ಸಾಕ್ಷಿಯಾದರು. ಕಾರ್ಯಕ್ರಮದ ಆರಂಭದಿಂದ ಅಂತ್ಯವರೆಗೆ ಶಿಸ್ತುಬದ್ಧ ವ್ಯವಸ್ಥೆ, ಸಮಯಪಾಲನೆ, ಅತಿಥಿಗಳ ಆತಿಥ್ಯ, ನವದಂಪತಿಗಳಿಗೆ ಅಗತ್ಯವಿರುವ ವಸ್ತುಗಳ ಒದಗಿಕೆ, ಊಟೋಪಚಾರ ಹಾಗೂ ಭದ್ರತಾ ವ್ಯವಸ್ಥೆ ಸೇರಿದಂತೆ ಎಲ್ಲಾ ಅಂಶಗಳಲ್ಲಿ ಉತ್ತಮ ನಿರ್ವಹಣೆ ಕಂಡುಬಂದಿತು. ಇದರಿಂದ ಸಾರ್ವಜನಿಕ ವಲಯದಲ್ಲಿ ವ್ಯಾಪಕ ಪ್ರಶಂಸೆ ವ್ಯಕ್ತವಾಯಿತು.

ಸನ್ಮಾನ ಸಮಾರಂಭದಲ್ಲಿ ಅಭಿಪ್ರಾಯ ಸನ್ಮಾನ ಸ್ವೀಕರಿಸಿ ಮಾತನಾಡಿದ ಸೈಯದ್ ಅಕ್ಟರ್ ಪಾಷಾ ಹುಸೇನಿ ಅವರು, "ಸಮಾಜದ ಕಟ್ಟಕಡೆಯ ವ್ಯಕ್ತಿಗಳ ಬದುಕಿನಲ್ಲಿ ನಗುವು ತರಲು ಸಾಧ್ಯವಾದರೆ ಅದೇ ನಿಜವಾದ ಸೇವೆ. ವಿವಾಹದಂತಹ ಮಹತ್ವದ ಕ್ಷಣದಲ್ಲಿ ಕುಟುಂಬಗಳಿಗೆ ನೆರವಾಗುವುದು ನನ್ನ ಪಾಲಿನ ಸಣ್ಣ ಪ್ರಯತ್ನ ಮಾತ್ರ. ಈ ಯಶಸ್ಸು ನನ್ನ ಒಬ್ಬರದು ಅಲ್ಲ, ಸ್ವಯಂಸೇವಕರು ಹಾಗೂ ಸಾರ್ವಜನಿಕರ ಸಹಕಾರದ ಫಲ" ಎಂದು ಹೇಳಿದರು. ಭವಿಷ್ಯದಲ್ಲಿಯೂ ಇಂತಹ ಸಾಮೂಹಿಕ ವಿವಾಹ, ಶಿಕ್ಷಣ ಸಹಾಯ, ಆರೋಗ್ಯ ಶಿಬಿರಗಳಂತಹ ಸಮಾಜಮುಖಿ ಕಾರ್ಯಕ್ರಮಗಳನ್ನು ಮುಂದುವರೆಸುವ ಸಂಕಲ್ಪವಿರುವುದಾಗಿ ಅವರು ತಿಳಿಸಿದರು.

ಗಣ್ಯರ ಪ್ರಶಂಸೆ ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಬಶಿರುದ್ದೀನ್, ಮುಖೀಮ್ ಸೇ–ರಿದಂತೆ ಹಲವು ಗಣ್ಯರು, ಸೈಯದ್ ಅಕ್ಟರ್ ಪಾಷಾ ಹುಸೇನಿ ಅವರ ಸಾಮಾಜಿಕ ಬದ್ಧತೆ, ಸಂಘಟನಾ ಸಾಮರ್ಥ್ಯಮತ್ತುನಿರಂತರಸೇವೆಯನ್ನುಶ್ಲಾಘಿಸಿದರು.

"ಇಂತಹ ಸಾಮೂಹಿಕ ವಿವಾಹ ಕಾರ್ಯಕ್ರಮಗಳು ಸಾಮಾಜಿಕ ಸಮಾನತೆ, ಸಹೋದರತ್ವ ಹಾಗೂ ಸೌಹಾರ್ದತೆಯನ್ನು ಬಲಪಡಿಸುತ್ತವೆ. ಸಮಾಜದ ಪ್ರತಿಯೊಬ್ಬರೂ ಇಂತಹ ಕಾರ್ಯಗಳಿಗೆ ಕೈಜೋಡಿಸಬೇಕು" ಎಂದು ಅವರು ಹೇಳಿದರು. ಸಮಾಜದಲ್ಲಿ ಸ್ಪಷ್ಟ ಸಂದೇಶ ಸರಳ ವಿವಾಹ ಸಂಸ್ಕೃತಿ, ಅನಾವಶ್ಯಕ ಖರ್ಚಿಗೆ ಕಡಿವಾಣ ಮತ್ತು ಮಾನವೀಯ ಮೌಲ್ಯಗಳ ಪ್ರಚಾರ ಎಂಬ ಸಂದೇಶವನ್ನು ಈ ಕಾರ್ಯಕ್ರಮ ಸಮಾಜ–ಕ್ಕೆ ನೀಡಿದೆ. ಇದೇ ಕಾರಣಕ್ಕಾಗಿ ಈ ಸಾಮೂಹಿಕ ವಿವಾಹ ಕಾರ್ಯಕ್ರಮವು ಸಾರ್ವಜನಿಕ ವಲಯದಲ್ಲಿ ವಿಶೇಷ ಗಮನ ಸೆಳೆದಿದೆ. ಈ ಕಾರ್ಯಕ್ರಮದ ಯಶಸ್ವಿಗೊಳಿಸಿದ ಸೈಯದ್ ಅಕ್ಟರ್ ಪಾಷಾ ಹುಸೇನಿ ಅವರಿಗೆ ಭವ್ಯ ಸನ್ಮಾನ ನೆರವೇರಿಸಿದರು...

## ಸಾಹಿತ್ಯ ಸಿಂಚನ

ಬೆಳಕಿನೆಡೆಗೆ ನಡೆ ಮನವೇ

ನೋವುಗಳೆಂಬ ನದಿಯನ್ನು ದಾಟಿ
ನಲಿವೆಂಬ ದಡ ಸೇರು ಮನವೇ
ಅಜ್ಞಾನದಿಂದ ಸುಜ್ಞಾನದ ಕಡೆಗೆ
ನಡಿ ನೀನು ಮೂಡ ಮನವೇ!!

ಕಮರಿ ಹೋದ ಕನಸುಗಳ ನೆನೆದು
ಮಾತು ಮರೆತು ಮೌನವಾಗಿ ಕೂರದೇ
ಉಸಿರು ಕಟ್ಟಿದ ಮನದ ಭಾವವನ್ನು ತೊರೆದು ಬಿಡು
ವಾಸ್ತವ ಬದುಕಿನಡೆಗೆ ಸಾಗಿಬಿಡು !!

ನಶ್ವರವಾದ ಜಗದಲ್ಲಿ ನೋವುಗಳು ಸಹಜ
ನೀ ಅರಿತು ನಡೆ ಪರಮಾತ್ಮನ ಕಡೆ ಮನವೇ
ನಮ್ಮಲ್ಲಿನ ಅರಿವು ನಮಗಾದಗ ಬೆಳಕು ಮೂಡುವುದು
ಇನ್ನಾದರೂ ಸಾಗಲಿ ಜೀವನ ಬೆಳಕಿನಡಿಗೆ!!

ಕೂಡು ಮನವೇ ಸತ್ಯದ ಸದನದಲ್ಲಿ
ಬೆಳಕಿನ ದಾರಿ ತೋರುವನು ಭಗವಂತ
ಬಾಳಲಿ ಭರವಸೆ ಎಂಬ ಬೆಳಕು ಮೂಡಲಿ
ಸಾಗಲಿ ಸಾರ್ಥಕತೆಯಡೆಗೆ ಬದುಕು
ಬೆಳಕಿನಡೆಗೆ ನಡಿ ನೀ ಮನವೇ!!

ಶ್ರೀ ಮತಿ ಕವಿತಾ ಹಿರೇಮಠ ಕವಿತಾಳ

# ಮಟಮಾರಿ ಗ್ರಾಮ ಪಂಚಾಯತ್ ಕೆಡಿಪಿ ಸಭೆ ಯಶಸ್ವಿ ಪ್ರತಿಯೊಬ್ಬ ಅಧಿಕಾರಿ ಸೇವಾಮನೋಭಾವದಿಂದ ಕಾರ್ಯನಿರ್ವಹಿಸಲು ಸಲಹೆ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ತಾಲೂಕಿನ ಮಟಮಾರಿ ಗ್ರಾಮ ಪಂಚಾಯತ್ ವತಿಯಿಂದ ಮಟಮಾರಿ ಗ್ರಾಮದಲ್ಲಿ ಜನವರಿ 23ರ ಶುಕ್ರವಾರ ದಂದು ಗ್ರಾಮ ಪಂಚಾಯತ್ ವಿವಿಧ ಯೋಜನೆಗಳ ಕು–ರಿತು ತ್ರೈಮಾಸಿಕ ಪ್ರಗತಿ ಪರಿಶೀಲನಾ (ಕೆಡಿಪಿ) ಸಭೆಯನ್ನು ಯಶಸ್ವಿಯಾಗಿ ನಡೆಸಲಾಯಿತು.**

ಸಭೆಯು ಗ್ರಾಮ ಪಂಚಾಯತ್ ಅಧ್ಯಕ್ಷೆ ಅಂಬಿಕಾ ಪ್ರಭುರಾಜ ಅವರ ಅಧ್ಯಕ್ಷತೆಯಲ್ಲಿ ಹಾಗೂ ಉಪಾಧ್ಯಕ್ಷರು ಮತ್ತು ಸ್ಥಾಯಿ ಸಮಿತಿ ಅಧ್ಯಕ್ಷರಾದ ಹುಸೇನ್ ಬಾಷಾ ಅವರ ಮಾರ್ಗದರ್ಶನದಲ್ಲಿ ನಡೆಸಲಾಯಿತು. ಸಭೆಯಲ್ಲಿ ಗ್ರಾಮ ಪಂಚಾಯತ್ ವ್ಯಾಪ್ತಿಯ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಕ್ರಮವಾಗಿ ಆಹ್ವಾನಿಸಿ, ತಮ್ಮ ತಮ್ಮ ಇಲಾಖೆಗಳ ಪ್ರಗತಿ ವರದಿ, ಮುಂದಿನ ಕಾರ್ಯಯೋಜನೆಗಳು ಹಾಗೂ ಅನುಷ್ಠಾನದಲ್ಲಿರುವ ಕಾಮಗಾರಿಗಳ ಸ್ಥಿತಿಗತಿಗಳ ಕುರಿತು ಸವಿಸ್ತಾರವಾಗಿ ಚರ್ಚೆ ನಡೆಸಲಾಯಿತು.

ಈ ವೇಳೆ ಗ್ರಾಮ ಪಂಚಾಯತ್ ಉಪಾಧ್ಯಕ್ಷರಾದ ಹುಸೇನ್ ಬಾಷಾ ಅವರು ಮಾತನಾಡಿ, ಸಾರ್ವಜನಿಕರೇ ಸರ್ಕಾರದ ಎಲ್ಲಾ ಇಲಾಖೆಗಳ ಮೂಲಾಧಾರ ಮತ್ತು ಹಕ್ಕುದಾರರು ಎಂಬ ಮನೋಭಾವದಿಂದ ಪ್ರತಿಯೊಬ್ಬ ಅಧಿಕಾರಿ ಸೇವಾಮನೋಭಾವದಿಂದ



ಕಾರ್ಯನಿರ್ವಹಿಸಬೇಕು. ಎಲ್ಲಾ ಇಲಾಖೆಗಳು ಸಾರ್ವಜನಿಕರ ಹಿತಾಸಕ್ತಿಯನ್ನು ಕೇಂದ್ರಬಿಂದುಗೊಳಿಸಿ ಕಾರ್ಯನಿರ್ವಹಿಸಬೇಕು. ಹಾಗೂ ಸರ್ಕಾರದ ಯೋಜನೆಗಳ ಕು–ರಿತು ಜನಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಫಲಾನುಭವಿಗಳಿಗೆ ಯೋಜನೆಗಳ ಸದುಪಯೋಗ ತಲುಪುವಂತೆ ಕ್ರಮವಹಿಸಬೇಕು ಎಂದರು. ಶಿಕ್ಷಣ ಇಲಾಖೆಯ ಕುರಿತು ಅವರು ಉಲ್ಲೇಖಿಸಿ ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ಒದಗಿಸಿದಲ್ಲಿ ಮಾತ್ರ 10ನೇ ತರಗತಿಯಲ್ಲಿ ಉತ್ತಮ ಫಲಿತಾಂಶ ಸಾಧ್ಯವಾಗುತ್ತದೆ. ಗುಣಮಟ್ಟದ ಶಿಕ್ಷಣವೇ ಸುಶಿಕ್ಷಿತ ಮತ್ತು ಸದೃಢ ಸಮಾಜ ನಿರ್ಮಾಣಕ್ಕೆ ದಾರಿ ಮಾಡಿಕೊಡುತ್ತದೆ ಎಂದು ಅಭಿಪ್ರಾಯಪಟ್ಟರು. ಸಾರ್ವಜನಿಕರಿಗೆ ಉತ್ತಮ ಚಿಕಿತ್ಸೆ, ಸಮಯೋಚಿತ ಸ್ಪಂದನೆ ಹಾಗೂ ರೋಗಿಗಳೊಂದಿಗೆ ಶಿಷ್ಟಾಚಾರಪೂರ್ಣ ಮತ್ತು ಮಾನವೀಯ ವರ್ತನೆ ಕಡ್ಡಾಯವಾಗಿರಬೇಕು.

ಎಲ್ಲಾ ಸರ್ಕಾರಿ ಕಚೇರಿ ಆವರಣಗಳು, ಪ್ರಮುಖ ರಸ್ತೆ ಬದಿಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಗಿಡ ನೆಡುವ ಕಾರ್ಯಕ್ರಮಗಳನ್ನು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಂತೆ ನಿರ್ದೇಶನ ನೀಡಿದರು. ಕಂದಾಯ ಇಲಾಖೆಯಿಂದ ಗ್ರಾಮ ಲೆಕ್ಕಾಧಿಕಾರಿಗಳು ಪಿಂಚಣಿ, ಕೃಷಿ ಭೂಮಿ ವರ್ಗಾವಣೆ ಸೇರಿದಂತೆ ವಿವಿಧ ಕಂದಾಯ ಸೇವೆಗಳ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡುವ ಜಾಗೃತಿ ಕಾರ್ಯಕ್ರಮಗಳನ್ನು



ನಡೆಸಿ, ಜನರಿಗೆ ಸುಲಭವಾಗಿ ಸೇವೆಗಳು ಲಭ್ಯವಾಗುವಂತೆ ಕ್ರಮವಹಿಸಬೇಕು ಎಂದರು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಅಂಗನವಾಡಿ ಮಕ್ಕಳಿಗೆ ಪೌಷ್ಟಿಕ ಆಹಾರ ಒದಗಿಸುವುದು, ಗುಣಮಟ್ಟದ ಪೂರ್ವ ಪ್ರಾಥಮಿಕ ಶಿಕ್ಷಣ ನೀಡುವುದು. ಹಾಗೂ ಮಹಿಳಾ ಸಬಲೀಕರಣಕ್ಕೆ ಸಂಬಂಧಿಸಿದ ಜಾಗೃತಿ ಕಾರ್ಯಕ್ರಮಗಳನ್ನು ಪರಿಣಾಮಕಾ–ರಿಯಾಗಿ ಜಾರಿಗೆ ತರುವಂತೆ ಸೂಚಿಸಲಾಯಿತು. ಸಭೆಯ ಅಂತ್ಯದಲ್ಲಿ ಎಲ್ಲಾ ಇಲಾಖೆಗಳು ಪರಸ್ಪರ ಸಮನ್ವಯದೊಂದಿಗೆ ಕಾರ್ಯನಿರ್ವಹಿಸಿ, ಸಾರ್ವಜನಿಕರ ಹಿತಾಸಕ್ತಿಗೆ ಆದ್ಯತೆ ನೀಡುತ್ತಾ ಸರ್ಕಾರದ ಯೋಜನೆಗಳನ್ನು ಪರಿಣಾಮಕಾ–ರಿಯಾಗಿ ಅನುಷ್ಠಾನಗೊಳಿಸುವಂತೆ ನಿರ್ದೇಶನ ನೀಡಲಾಯಿತು.

ಇದೇ ಸಂದರ್ಭದಲ್ಲಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷರಾದ ಹುಲಿಗೆಮ್ಮ ನರಸಣ್ಣ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶೇಖರಪ್ಪ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿ, ಸಿಬ್ಬಂದಿಗಳು ಸಭೆಯಲ್ಲಿ ಇದ್ದರು.

## ರಾಯಚೂರು ಜಿಲ್ಲಾ ಉತ್ಸವ: ಫೆ.05ರಿಂದ 07ರವರೆಗೆ ವಿವಿಧ ಕಾರ್ಯಕ್ರಮಗಳ ಮಹಾಸಂಭ್ರಮ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ರಾಯಚೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ–2026ರ ಅಂಗವಾಗಿ ಫೆಬ್ರವರಿ 05, 06 ಹಾಗೂ 07ರವರೆಗೆ ನಗರದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣದಲ್ಲಿ ಎಡೆದೊರೆ ನಾಡಿನ ಕಲೆ, ಸಾಹಿತ್ಯ, ಸಾಂಸ್ಕೃತಿಕ, ವಿಚಾರ ಸಮಕಿರಣ, ಯುವಜನೋತ್ಸವದ ಮಹಾಸಂಭ್ರಮ ಕಾರ್ಯಕ್ರವನ್ನು ಹಮ್ಮಿಕೊಳ್ಳಲಾಗಿದೆ.**

ಕಾರ್ಯಕ್ರಮದಲ್ಲಿ ಕೃಷಿ ಮೇಳೆ–2026, ಫಲಪುಷ್ಪ ಪ್ರದರ್ಶನ & ಮತ್ಸ್ಯ ಮೇಳ, ಪಂಚ ಗ್ಯಾರಂಟಿ ಮೇಳ, ಆಹಾರ ಮೇಳ, ಉದ್ಯೋಗ ಮೇಳ, ಕರಕುಶಲ, ಕೈಗಾ–ರಿಕೆ, ಪುಸ್ತಕ ಪ್ರದರ್ಶನ ಹಾಗೂ ಚಿತ್ರ ಸಂತೆ, ಕ್ರೀಡಾಕೂಟ, ಕವಿ ಮಹಿಳಾ ಮತ್ತು ಮಾಧ್ಯಮ ಗೋಷ್ಠಿ ನಡೆಯಲಿದೆ. ಫಬ್ರವರಿ 05ರಂದು ಖ್ಯಾತ ಗಾಯಕರಾದ ಸಂಜಿತ್ ಹೆಗಡೆ, ಫೆಬ್ರವರಿ 06ರಂದು ರಾಜೇಶ್ ಕೃಷ್ಣನ್ ಹಾಗೂ ಫೆಬ್ರವರಿ 07ರಂದು ವಿಜಯ ಪ್ರಕಾಶ್ ಅವರಿಂದ ಸಂಗೀತ ಕಾರ್ಯಕ್ರಮಗಳು ಜರುಗಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸುವಂತೆ ರಾಯಚೂರು ಜಿಲ್ಲಾ ಉತ್ಸವ ಸಮಿತಿಯು ಪ್ರಕಟಣೆಯಲ್ಲಿ ತಿಳಿಸಿದೆ.

1ನೇ ಪುಟದಿಂದ....

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಉತ್ತೀರ್ಣ ಅಂಕಗಳನ್ನು 33ಕ್ಕೆ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ 30ಕ್ಕೆ ನಿಗದಿಪಡಿಸಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ಮಹತ್ವದ ಘೋಷಣೆ ಮಾಡಿದ್ದಾರೆ. ಆಂತರಿಕ ಮೌಲ್ಯಮಾಪನದಲ್ಲಿ 20ಕ್ಕೆ 20 ಅಂಕ ಪಡೆದ ಎಸ್‌ಎಸ್–ಎಲ್‌ಸಿ ವಿದ್ಯಾರ್ಥಿಗಳು, ಲಿಖಿತ ಪರೀಕ್ಷೆಯಲ್ಲಿ ಕೇವಲ ಶೇ.13ರಷ್ಟು ಅಂಕ ಗಳಿಸಿದರೂ ಉತ್ತೀರ್ಣರಾಗಲು ಅವಕಾಶ ಕಲ್ಪಿಸಲಾಗಿದೆ. ಸಮಗ್ರ ಶಿಕ್ಷಣ ಕರ್ನಾಟಕ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಈ ಹೊಸ ಬದಲಾವಣೆಗಳನ್ನು ಪ್ರಕಟಿಸಲಾಗಿದ್ದು,ಇದು ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಯ ಮೇಲೆ ಮಹತ್ತರ ಪರಿಣಾಮ ಬೀರಲಿದೆ. ಮೇ ತಿಂಗಳ ಮೊದಲ ವಾರದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ–1ರ ಫಲಿತಾಂಶ ಪ್ರಕಟವಾಗಲಿದ್ದು, ಮುಂದಿನ ಹಂತದ ಕೋರ್ಸ್‌ಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಕುತೂಹಲ ಮೂಡಿದೆ. ಎಸ್‌ಎಸ್‌ಎಲ್‌ಸಿ ನಂತರ ಪಿಯುಸಿ, ಡಿಪ್ಲೊಮೋ ಅಥವಾ ಐಟಿಐ ಸೇರಲು ಬಯಸುವವ–ರಿಗೆ ಲಭ್ಯವಿರುವ ವಿವಿಧ ವಿಷಯ ಸಂಯೋಜನೆಗಳ ಬಗ್ಗೆ ಮಾಹಿತಿ ನೀಡಲಾಗಿದೆ. ಈ ಆಯ್ಕೆಗಳು ವಿದ್ಯಾರ್ಥಿಗಳು ತಮ ಆಸಕ್ತಿಗೆ ಅನುಗುಣವಾಗಿ ಭವಿಷ್ಯದ ವೃತ್ತಿಜೀವನವನ್ನು ರೂಪಿಸಿಕೊಳ್ಳಲು ನೆರವಾಗಲಿವೆ. ಸರಿಯಾದ ಮಾರ್ಗದರ್ಶನದಿಂದ ವಿದ್ಯಾರ್ಥಿಗಳು ಉತ್ತಮ ಶೈಕ್ಷಣಿಕ ನಿರ್ಧಾರ ಕೈಗೊಳ್ಳಬಹುದು. ತಮಗೆ ದೊರೆತ ಬಹುಮಾನವನ್ನು ಹೇಗೆ ಬಳಸಿಕೊಳ್ಳಬೇಕೆಂಬ ಸ್ವಾತಂತ್ರ್ಯ ವಿದ್ಯಾರ್ಥಿಗಳಿಗೆ ನೀಡಬೇಕು ಎಂಬ ಕಾರಣ–ಕ್ಕೆ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಲ್ಯಾಪ್‌ಟಾಪ್ ನೀಡುವ ಬದಲು ನಗದು ಬಹುಮಾನ ನೀಡುವುದ–ರಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ಆಯ್ಕೆ ಮತ್ತು ಪ್ರಯೋಜನ ದೊರಕಲಿದೆ ಎಂದು ಶಾಲಾ ಹಾಗೂ ಶಿಕ್ಷಣ ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ.

# ಆರ್.ಬಿ. ತಿಮ್ಮಾಪೂರ ರಾಜಕೀಯ ವರ್ಚಸ್ಸು ಕುಗ್ಗಿಸಲು ಷಡ್ಯಂತ್ರ :ಪ್ರಭುಲಿಂಗ ಮೇಗಳಮನಿ

❑ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಸಚಿವ ತಿಮ್ಮಾಪೂರ ಅವರ ವಿರುದ್ಧ ನಡೆಯುತ್ತಿರುವ ರಜಕೀಯ ಪಿತೂ–ರಿಗಳನ್ನು ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ರಾಜ್ಯ ಸಮಿತಿ ತೀವ್ರವಾಗಿ ಖಂಡಿಸುತ್ತದೆ. ಸಚಿವರಿಗೆ ವಹಿಸಿದ ಇಲಾಖೆಯ ಕಾರ್ಯಗಳನ್ನು ಉತ್ತಮವಾಗಿ ನಿಭಾಯಿಸುತ್ತಿದ್ದು, ಬಾಗಲಕೋಟೆ ಜಿಲ್ಲೆಯನ್ನು ಅಭಿವೃದ್ಧಿ ಪತದತ್ತ ಮುನ್ನಡೆಸಿಕೊಂಡು ಹೋಗುತ್ತಿರುವುದು ಅವರ ವಿರೋಧಿಗಳಿಗೆ ಸಹಿಸದಾಗಿದೆ.**

ಅಲ್ಲದೇ ಅಬಕಾರಿ ಇಲಾಖೆಯಲ್ಲಿ



ಸಾಕಷ್ಟು ಬದಲಾವಣೆ ಮಾಡಿರುವುದು ರಾಜ್ಯ ರಾಜಕಾರಣದಲ್ಲಿ ದಿನದಿಂದ ದಿನನಕ್ಕೆ ಬೆಳೆಯುತ್ತಿರುವ ಅವರ ಜನಪ್ರಿಯತೆಯನ್ನು ಸಹಿಸದ ರಾಜಕೀಯ ವಿರೋಧಿಗಳು ಅಬಕಾರಿ ಸಚಿವ ತಿಮ್ಮಾಪೂರ ಇವರೊಬ್ಬರನ್ನೇ ಗುರಿಯಾಗಿಸಿಕೊಂಡು ಪಟ್ಟಭದ್ರ ಹಿತಾಶಕ್ತಿಗಳು ಅವರ ವಿರುದ್ಧ ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ . ಆರ್.ಬಿ.ತಿಮ್ಮಾಪೂರು ರವರು ಹುಟ್ಟು ಹೋರಾಟಗಾರರು, ಅಲ್ಪಸಂಖ್ಯಾತರ ವರ್ಗಗಳಿಗಾಗಿ ಹಗಲಿರುಳು ಶ್ರಮಿಸುತ್ತಿದ್ದಾರೆ. ಇವರು ಯಾವುದೇ ಆಸೆ ಆಮಿಷಗಳಿಗೆ ಬಲಿಯಾದವರಲ್ಲ, ಅವರೊಬ್ಬ ದಲಿತ ರಾಗಿರುವುದರಿಂದ ಅವರನ್ನು ಸಿಲುಕಿಸುವ ಕುತಂತ್ರ ಮಾಡಲಾಗುತ್ತಿದೆ.

ಪ್ರಾಮಾಣಿಕ ನಾಯಕನ ವಿರುದ್ಧ ಯಾವುದೇ ಕುತಂತ್ರಗಳು ಫಲಿಸುವುದಿಲ್ಲ. ಸಚಿವರು ಲಂಚಕ್ಕೆ ಬೇಡಿಕೆಯಿಟ್ಟ ಪ್ರಕರಣದಲ್ಲಿ ಅಧಿಕಾರಿಯ ಪಾತ್ರವಿದೆ. ಅವರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. ಅಧಿಕಾರಿಯ ವಿರುದ್ಧ ಕ್ರಮ ಕೈಗೊಳ್ಳಲು ಒತ್ತಾಯ ಮಾಡುವುದನ್ನು ಬಿಟ್ಟು ಸಚಿವರ ವಿರುದ್ಧ ಪಿತೂರಿ ನಡೆಸುವುದು ತರವಲ್ಲ. ಈ ಕುತಂತ್ರಿಗಳ ವಿರುದ್ಧ ದಲಿತ, ಹಿಂದುಳಿದ, ಅಲ್ಪಸಂಖ್ಯಾ ತರು ಸೇರಿ ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ಹೋರಾಟವನ್ನು ಮಾಡಬೇಕಾಗುತ್ತದೆಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಕ್ಕಳ ವಿಕಸನಕ್ಕೆ ಕಲಿಕಾ ಹಬ್ಬ ಸಹಕಾರಿ: ರಾಘವೇಂದ್ರ ಕಟ್ಟಿಮನಿ

❑ ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಕಲಿಕಾ ಹಬ್ಬವು ಮಕ್ಕಳನ್ನು ಕಲಿಕೆಯ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ತೊಡಗಿಸುವ ಮೂಲಕ ಅವರ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗಿದೆ ಎಂದು ಗುಡದೂರು ವಲಯ ಸಮೂಹ ಸಂಪನ್ಮೂಲ ವ್ಯಕ್ತಿ ರಾಘವೇಂದ್ರ ಕಟ್ಟಿಮನಿ ಹೇಳಿದರು.**

ತಾಲೂಕಿನ ಹಸಮಕಲ್ ಗ್ರಾಮದ ಉನ್ನತೀಕರಿಸಿದ ಸರಕಾರಿ ಹಿರಿಯ ಪ್ರಾಥ–'ಮಿಕ ಶಾಲೆಯಲ್ಲಿ ಆಯೋಜಿಸಿದ್ದ ಗುಡದೂರು ಕ್ಲಸ್ಟರ್ ಮಟ್ಟದ ಕಲಿಕಾ ಹಬ್ಬ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸ್ಥಳೀಯ ಕಲೆಗಳು, ಜನಪದ ಹಾಡುಗಳು ಮತ್ತು ಕಥೆಗಳಿಗೆ ಈ ಹಬ್ಬದಲ್ಲಿ ಹೆಚ್ಚಿನ ಮಹತ್ವ ನೀಡಲಾಗುತ್ತದೆ ಎಂದರು. ಇದು ಮಕ್ಕಳಿಗೆ ತಮ್ಮ ಸಂಸ್ಕೃತಿಯ ಪರಿಚಯ, ಚಿತ್ರಕಲೆ, ಮಣ್ಣಿನ ಮಾದರಿ ತಯಾರಿಕೆ, ಕಾಗದದ ಕೆಲಸ, ನಾಟಕಗಳ ಮೂಲಕ ಮಕ್ಕಳ ಸೃಜನಶೀಲ ಶಕ್ತಿಯನ್ನು ಉತ್ತೇಜಿಸಲಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮವನ್ನು ಬಸವಪ್ರಸಾದ ಶರಣರು ಉದ್ಘಾಟಿಸಿ ನಂತರ ಮಾತನಾಡಿದ ಅವರು ಕಲಿಕಾ ಹಬ್ಬ ಮಕ್ಕಳ ಮತ್ತು ಪಾಲಕ–ರಿಗಾಗಿ ಆಯೋಜನೆ ಮಾಡಿದಂತಹ




ಕಾರ್ಯಕ್ರಮ. ಈ ವೇದಿಕೆ ಮೂಲಕ ಮಕ್ಕಳು ತಾವು ಕಲಿತದ್ದು, ಹೋರ ಹಾಕುವಂತಹ ವೇದಿಕೆಯಾಗಿದೆ ಎಂದರು. ಶಾಲೆಯ ಮುಖ್ಯ ಶಿಕ್ಷಕ ಅಮರೇಶ ಗುಡದೂರು ಮಾತನಾಡಿ, ಕಲಿಕಾ ಹಬ್ಬವು ಮಕ್ಕಳಲ್ಲಿ ಕಲಿಯುವ ಆಸಕ್ತಿ ಹೆಚ್ಚಿಸಲು ಮತ್ತು ಅವರಲ್ಲಿ ಅಡಗಿರುವ ಪ್ರತಿಭೆಯನ್ನು ಹೊರಹಾಕಲು ಆಯೋಜಿಸಲಾಗುವ ಒಂದು ವಿಶೇಷ ಕಾರ್ಯಕ್ರಮ ಎಂದು ತಿಳಿಸಿದರು. ಸಿದ್ದನಗೌಡ ತುರವಿಹಾಳ, ನಿವೃತ್ತಶಿಕ್ಷಕ ಚನ್ನಬಸಯ್ಯ ಮಾತನಾಡಿದರು.

ಈ ಸಂದರ್ಭದಲ್ಲಿ ಗ್ರಾ.ಪಂ ಅಧ್ಯಕ್ಷೆ ಮಾರೆಮ್ಮ, ಎಸ್‌ಡಿಎಂಸಿ ಅಧ್ಯಕ್ಷ ದುರುಗಪ್ಪ, ಮೈಬುಸಾಬ ಮುದ್ದಾಪೂರು, ಬಸವರಾಜಸ್ವಾಮಿ ಹಸಮಕಲ್, ಅಮರೇಶಪ್ಪ ದುಗನೂರ, ಗೋವಿಂದಪ್ಪ ರಂಗಾಪೂರ, ಶಿವಕುಮಾರ ಬಿ.ಆರ್.ಪಿ. ಹುಲಗಪ್ಪ ಇ.ಸಿ.ಓ. ಪಿಡಿಓ ಕೃಷ್ಣ, ನಾಗನಗೌಡ, ಪಂಪಯ್ಯಸ್ವಾಮಿ ಹಿರೇಮಠ, ಹುಲಗಪ್ಪ, ಮಾನಪ್ಪ ವಡ್ಡಿ, ನಾಗರತ್ನ, ಈಶ್ವರಪ್ಪ ಹಸಮಕಲ್, ನೇತ್ರಾವತಿ, ಯಮನಪ್ಪ ಮಹಾಂತೇಶ, ಲಕ್ಷ್ಮಣ ರಂಗಾಪೂರ, ಯಂಕಣ್ಣ ದಿನ್ನಿ, ನಾಗರಾಜ ಬೋವಿ, ಪಕೀರಸ್ವಾಮಿ, ನಿರುಪಾದಿ, ನಾಗಲಿಂಗ, ಮಹಾದೇವ, ದೇವಯ್ಯ, ದುರುಗೇಶ, ಶಿಕ್ಷಕಿಂ–ಯರಾದ ಯಲ್ಲಮ್ಮ, ಶರಣಮ್ಮ ಇದ್ದರು.

# ರಾಜಕೀಯ ಪ್ರಾತಿನಿಧ್ಯ ಅನಿವಾರ್ಯ: ಜಿ.ಬಿ. ವಿನಯ್ ಕುಮಾರ್

❑ ನೈಜ್ಯ ದೆಸೆ ನ್ಯೂಸ್

**ದಾವಣಗೆರೆ: ದಾವಣಗೆರೆ ಜಿಲ್ಲೆಯಲ್ಲಿ ಕುರುಬ ಸಮಾಜ ಶೈಕ್ಷಣಿಕ ಆರ್ಥಿಕ ರಾಜ–ಕೀಯವಾಗಿ ಪ್ರಬಲರಾಗಬೇಕಿದೆ ಹಾಗೂ ರಾಜಕೀಯ ಅಧಿಕಾರ ಅನಿವಾರ್ಯವಾಗಿದೆ ಮುಂದಿನ ದಿನಗಳಲ್ಲಿ ಒಳ್ಳೆಯ ದಿನಗಳು ಬಂದೇ ಬರುತ್ತವೆ ಅವಕಾಶಗಳಿಗೆ ಕಾಯಬೇಕಾಗಿದೆ ಹಾಗೂ ಅವಕಾಶಗಳನ್ನು ಸೃಷ್ಟಿಸಿಕೊಳ್ಳಬೇಕೆಂದು ಎಂದು ಇನ್ ಸೈಟ್ಸ್ ಐಎಎಸ್ ಸಂಸ್ಥಾಪಕ ನಿರ್ದೇಶಕರು & ಸ್ವಾಭಿಮಾನಿ ಬಳಗದ ಸಂಸ್ಥಾಪಕ ರಾಜ್ಯಾಧ್ಯಕ್ಷ ಜಿ.ಬಿ. ವಿನಯ್ ಕುಮಾರ್ ಹೇಳಿದರು.**

ಇಂದು ದಾವಣಗೆರೆ ಜಿಲ್ಲಾ ಕುರುಬರ ವಿದ್ಯಾವರ್ಧಕ ಸಂಘದಲ್ಲಿ ವಿದ್ಯಾರ್ಥಿ ನಿಲಯದ ಒಳಾಂಗಣಕ್ಕೆ ಬ್ರಿಕ್ಸ್ ಹಾಗೂ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಗ್ರಂಥಾಲಯದ ವ್ಯವಸ್ಥೆಗೆ 2ಲಕ್ಷ ಕೊಡುಗೆ ನೀಡಿದ ಜಿ.ಬಿ ವಿನಯ್ ಕುಮಾರ್ ಅವರಿಗೆ ವಿದ್ಯಾವರ್ಧಕ ಸಂಘದ ಆಡಳಿತ ಮಂಡಳಿಯವರು ಈ ಸಂದರ್ಭದಲ್ಲಿ ಸನ್ಮಾನಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು ರಾಜಕೀಯ ಅಧಿಕಾರವು ಸಮಾಜದಲ್ಲಿನ ಸಾಮಾಜಿಕ ನ್ಯಾಯ, ಸಂಪನ್ಮೂಲಗಳ ಹಂಚಿಕೆ



ಮತ್ತು ಅಭಿವೃದ್ಧಿಗೆ ಅಡಿಪಾಯವಾಗಿದ್ದು, ಅಧಿಕಾರದ ವಿಕೇಂದ್ರೀಕರಣವು ಪಾರದರ್ಶಕ ಆಡಳಿತಕ್ಕೆ ಅನಿವಾರ್ಯವಾಗಿದೆ. ಆದ್ದರಿಂದ ನಾವು ರಾಜ–ಕೀಯ ಪ್ರಾತಿನಿಧ್ಯ ಪಡೆಯಲೇ ಬೇಕಾಗಿದೆ ಎಂದರು.

ಕುರುಬ ಸಮಾಜದ ಹಿರಿಯ ಚೇತನಗಳಾದ ದಿವಂಗತ ಚೆನ್ನಯ್ಯ ಒಡೆಯರ್ ಕೆ.ಮಲ್ಲಪ್ಪ ಕೆಂಗೋ ಹನುಮಂತಪ್ಪ ಡಾ. ವೈ ನಾಗಪ್ಪ ಇವರಗಳ ನಂತರ ಮುಂದೇನು ಎಂಬ ಆತಂಕದಲ್ಲಿ ಸಮಾಜವಿದೆ ಆದ್ದರಿಂದ ನಾವು ಮುಂದಿನ ದಿನಗಳಲ್ಲಿ ರಾಜಕೀಯ ಪ್ರಾತಿನಿಧ್ಯ ಪಡೆಯಬೇಕಾಗಿದೆ. ಈ ನಿಟ್ಟಿನಲ್ಲಿ ನಾವೆಲ್ಲ ಒಟ್ಟಾಗಿ ನಮ್ಮ ಹಕ್ಕು ಪಡೆಯಲು ಮುಂದಾಗಬೇಕೆಂದು ಈ ಸಂದರ್ಭದಲ್ಲಿ ಹೇಳಿದರು. ಮೊದಲು ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂದು ಈ ಸಲಹೆ ನೀಡಿದರು.. ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಎಚ್.ಜಿ ಗಣೇಶಪ್ಪ ಮಾತನಾಡಿ ವಿದ್ಯಾರ್ಥಿ ನಿಲಯದ ಒಳಾಂಗಣಕ್ಕೆ ಬ್ರಿಕ್ಸ್ ನೀಡಿ ವಿದ್ಯಾರ್ಥಿಗಳ ಆಟೋಪಚಾರಗಳಿಗೆ ಅನುಕೂಲವಾಗುವಂತೆ ಕ್ರೀಡಾಂಗಣಕ್ಕೆ ಎರಡು ಲಕ್ಷ ಹಣ ನೀಡಿದ್ದಾರೆ ವಿದ್ಯಾರ್ಥಿಗಳ ಸ್ಪರ್ಧಾತ್ಮಕ ಚಟುವಟಿ–ಕೆಗಳಿಗೆ ಗ್ರಂಥಾಲಯದ ವ್ಯವಸ್ಥೆಯು ಕೂಡ ಮಾಡಿಕೊಡಲಾಗುವುದೆಂದು ಹೇಳಿದ್ದಾರೆ.

ಸಮಾಜದ ವಿದ್ಯಾರ್ಥಿಗಳ ಅಭ್ಯುದಯಕ್ಕಾಗಿ ನಾವೆಲ್ಲರೂ ಶ್ರಮಿಸೋಣ ಎಂದು ಈ ಸಂದರ್ಭದಲ್ಲಿ ಹೇಳಿದರು

ಬೀರಲಿಂಗೇಶ್ವರ ಪದವಿ ಪೂರ್ವ ಕಾಲೇಜ್ ನ ಪ್ರಾಂಶುಪಾಲರಾದ ಎಚ್‌ಎಸ್ ರಾಜಶೇಖರ್ ಕೂಡ ಒಳಾಂಗಣದ ಅಭಿವೃದ್ಧಿಗೆ 50,000 ಸಾವಿರ ಕೊಡುವುದಾಗಿ ಹೇಳಿದರು ಈ ಸಂದರ್ಭದಲ್ಲಿ ಕಾರ್ಯದರ್ಶಿ ದೀಪಕ್ ಜೋಗಪ್ಪನವರ್. ಉಪಾಧ್ಯಕ್ಷರಾದ ರೇವಣಸಿದ್ದಪ್ಪ ನಿರ್ದೇಶಕರುಗಳಾದ ವಿರೂಪಾಕ್ಷಪ್ಪ ರಮೇಶ್ ಖಜಾಂಚಿ ಮಾಂತೇಶ್ ಚಿಕ್ಕಬೂದಿಹಾಳ್ ಭಗತ್ ಸಿಂಹ. ಎಲ್ ಬಿ ಬೈರೇಶ್. ಬಿ ಲಿಂಗರಾಜ್ ಎಂ ಮನು. ಶ್ರೀನಿವಾಸ್. ಬಸವರಾಜ್. ಬಟ್ಟಲಕಟ್ಟೆ ಪರಶುರಾಮ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ನೇಮಕಾತಿ ಪ್ರಕಟಣೆ

KKRTC ನೇಮಕಾತಿ 2026–78 ಚಾಲಕ ಹುದ್ದೆಗಳಿಗೆ ವಾಕ್–ಇನ್ ಸಂದರ್ಶನ KKRTC ನೇಮಕಾತಿ 2026: 78 ಚಾಲಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮವು ಜನವರಿ 2026 ರ KKRTC ಅಧಿಕೃತ ಅಧಿಸೂಚನೆಯ ಮೂಲಕ ಚಾಲಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೀದರ್–ಕರ್ನಾಟಕ ಸರ್ಕಾರದಲ್ಲಿ ವೃತ್ತಿಯನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 04–ಫೆಬ್ರವರಿ–2026 ರಂದು ವಾಕ್–ಇನ್–ಸಂದರ್ಶನಕ್ಕೆ ಹಾಜರಾಗಬಹುದು. ಅಧಿಸೂಚನೆ ಬಿಡುಗಡೆ ದಿನಾಂಕ: 20–01–2026 ವಾಕ್–ಇನ್ ದಿನಾಂಕ: 04–ಫೆಬ್ರವರಿ–2026 ವಾಕ್–ಇನ್ ಸಂದರ್ಶನವು ಫೆಬ್ರವರಿ 03 ಮತ್ತು 04, 2026 ರಂದು ನಡೆಯಲಿದೆ ಅಧಿಕೃತ ವೆಬ್‌ಸೈಟ್: kkrtc.karnataka.gov.in

## ಸಾರಿಗೆ ನಿಗಮಕ್ಕೆ ಚಾಲಕರ ಕೊಡುಗೆ ಅಪಾರ: ಜಾಧವ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಸಾರಿಗೆ ನಿಗಮದಲ್ಲಿ ಕೆಲಸ ಮಾಡುವ ಚಾಲಕರು ನಿಗಮದ ಆರ್ಥಿಕತೆಗೆ ಬೆನ್ನೆಲುಬಾಗಿ ಕೆಲಸ ಮಾಡುತ್ತಿದ್ದಾರೆ ಅವರ ಸೇವೆ ಅನನ್ಯವಾಗಿದೆ ಎಂದು ಘಟಕ ವ್ಯವಸ್ಥಾಪಕ ಪಿ.ಕೆ.ಜಾಧವ ಹೇಳಿದರು. ಶನಿವಾರ ಅಂತರಾಷ್ಟ್ರೀಯ ಚಾಲಕರ ದಿನಾಚರಣೆ ಅಂಗವಾಗಿ ಸ್ಥಳೀಯ ಸಾರಿಗೆ ಘಟಕ ಹಾಗೂ ಬಸ್ ನಿಲ್ದಾಣದಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.**

ನಮ್ಮ ಚಾಲಕರು ತಮ್ಮ ಜೀವದ ಹಂಗು ತೊರೆದು ಪ್ರಯಾಣಿಕರ ಸುರಕ್ಷತೆಗಾಗಿ ಕೆಲಸ ಮಾಡುತ್ತಾರೆ ಇದು ಸಂತೋಷದ ವಿಷಯ ಆದರೆ ಅವರು ತಮ್ಮ ಜೀವ ಹಾಗೂ ಆರೋಗ್ಯದ ಕುರಿತೂ ಹೆಚ್ಚು ಕಾಳಜಿ ವಹಿಸಬೇಕು. ಎಲ್ಲಾ ಒತ್ತಡಗಳಿಂದ ಮುಕ್ತರಾಗಿ ಎಚ್ಚರಿಕೆ ಹಾಗೂ ಸ್ವಯಂದಿಂದ ಚಾಲನೆ ಮಾಡಬೇಕು ಎಂದು ಸಲಹೆ ನೀಡಿದರು. ಲೆಕ್ಕ ಪತ್ರ ಅಧಿಕಾರಿ ಮಹಾಂತೇಶ ಕರಾಳೆ ಮಾತನಾಡಿ ನಿಗಮದಲ್ಲಿ




ಸೇವೆ ಸಲ್ಲಿಸುತ್ತಿರುವ ಚಾಲಕರು ಹಗಲು ರಾತ್ರಿ ಎನ್ನದೆ ಅವಿಶ್ರಾಂತವಾಗಿ ಕೆಲಸ ಮಾಡುತ್ತಿದ್ದಾರೆ ಅವರ ಈ ಸೇವೆಯ ಸ್ಮರಣೆಗಾಗಿಯೇ ಈ ದಿನವನ್ನು ಆಚರಿಸಲಾಗುತ್ತದೆ ಎಂದರು. ಪೀರಾಪೂರ ಪಿ.ಎಚ್.ಸಿ.ಆರೋಗ್ಯಾ ಧಿಕಾರಿ ಅಕ್ಷತಾ ವಂದಾಲ ಹಾಗೂ ವಿದ್ಯಾರ್ಥಿ ಅಮೂಲ ದ್ಯಾಪೂರ ಮಾತನಾಡಿ ಇವತ್ತು ನಾವು ನಮ್ಮ ಶಿಕ್ಷಣ ಮತ್ತು ಕರ್ತವ್ಯವನ್ನು ಸರಿಯಾದ ಸಮಯಕ್ಕೆ ನಿರ್ವಹಿಸುತಿ–ದ್ದೇವೆ ಎಂದಾದರೆ ಅದು ಚಾಲಕರ ಸೇವೆಯ ಕಾಳಜಿಯಿಂದಾಗಿ, ಭಗವಂತ ಅವರಿಗೆ ಐಶ್ವರ್ಯ ಆರೋಗ್ಯ ಕೊಟ್ಟು ಕಾಪಾಡಲಿ ಎಂದರು.

ಇದೇ ಸಂದರ್ಭದಲ್ಲಿ ಸಾರಿಗೆ ಘಟಕ ಹಾಗೂ ಬಸ್ ನಿಲ್ದಾಣದಲ್ಲಿ ಸಿಬ್ಬಂದಿ ವರ್ಗ, ಪ್ರಯಾಣಿಕರು ಹಾಗೂ ವಿದ್ಯಾರ್ಥಿಗಳಿಂದ ಚಾಲಕರನ್ನು ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಸಾರಿಗೆ ನೌಕರ ಸಂಘದ ಅಧ್ಯಕ್ಷ ಕುಮಾರ ಅಸ್ಕಿ, ವಿಭಾಗೀಯ ಉಪಾಧ್ಯಕ್ಷ ಜಿ.ಜಿ.ಬಿರಾದಾರ,ಎಸ್ಸಿ,ಎಸ್‌ಟಿ.ನೌಕರ ಸಂಘದ ಅಧ್ಯಕ್ಷ ಮರೆಪ್ಪ ಚಲವಾದಿ,ಎಎಸ್‌ಐ ಚಂದ್ರಶೇಖರ ಭಂಗಿ, ಸಾರಿಗೆ ಸಿಬ್ಬಂದಿಗಳಾದ ನಿಂಗನಗೌಡ ಬಿರಾದಾರ,ಶಿವಾನಂದ ಬಿ.ಎಚ್. ಕನಕಪ್ಪ ಓಲೇಕಾರ, ಬಸನಗೌಡ ಚೋಕಾವಿ, ದಾವಲಸಾಬ ನದಾಫ, ಶಿವಾನಂದ ಹೊಸಮನಿ, ಬಸನಗೌಡ,ಅಸ್ಕಿ, ಶರಣಗೌಡ ಲಿಂಗದಳ್ಳಿ, ಸಾಹೇಬ ಪಟೇಲ ಅಸ್ಕಿ,ಅಂಬರೀಶ ಮೇಟಿ, ಪ್ರಕಾಶ ಪಾಟೀಲ, ಮಹಾಂತಗೌಡ ಬಿರಾದಾರ,ಚಂದ್ರಕಲಾ ಮೇಟಿ, ಪ್ರತಿಭಾ ಹಜೇರಿ,ಶರಣಮ್ಮ ಅರೆನಾಡ,ಯೂನಿಯನ್ ಪದಾಧಿಕಾರಿಗಳು ಹಾಗೂ ಪ್ರಯಾಣಿಕರು ಇದ್ದರು.

## ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಸರಳ ವಿವಾಹಕ್ಕೆ ಪ್ರೋತ್ಸಾಹಧನ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು ಜನವರಿ 24 (ಕರ್ನಾಟಕ ವಾರ್ತೆ): 2025–26ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ 222 ರಲ್ಲಿ ಘೋಷಿಸಿರುವಂತೆ ಆರ್ಥಿಕವಾಗಿ ಹಿಂದುಳಿದಿರುವ ಅಲ್ಪಸಂಖ್ಯಾತ ಸಮುದಾಯದವದರ ಸರಳ ವಿವಾಹಗಳ ವೆಚ್ಚಗಳಿಗಾಗಿ ಪ್ರತಿ ಜೋಡಿಗೆ 50000 ರೂ. ಮತ್ತು ಸಾಮೂಹಿಕ ವಿವಾಹಗಳನ್ನು ಏರ್ಪಡಿಸುವ ಆಯೋಜಕರುಗಳಿಗೆ ಪ್ರೋತ್ಸಾಹ ಹಾಗೂ ವಿವಾಹದ ಖರ್ಚು–ವೆಚ್ಚಗಳಿಗಾಗಿ ಪ್ರತಿ ಜೋಡಿಗೆ 5000 ರೂ.ಗಳನ್ನು ನೀಡುವ ಕಾರ್ಯಕ್ರಮವನ್ನು ಷರತ್ತಿಗೊಳಪಟ್ಟು ಅನುಷ್ಠಾನಗೊಳಿಸಲು ಸರ್ಕಾರದ ಮಂಜೂರಾತಿ ನೀಡಿ ಆದೇಶಿಸಲಾಗಿದೆ. ರಾಯಚೂರು ಜಿಲ್ಲೆ ಮಾನವಿ ಪಟ್ಟಣದಲ್ಲಿ ದಾರುಸ್ಸಲಾಮ್ ಫೌಂಡೇಷನ್ ಟ್ರಸ್ಟ್ ಮಾನವಿ, ಈ ಸಂಸ್ಥೆಯವರು ಆಯೋಜಿಸಿರುವ ಕಾರ್ಯಕ್ರಮದಲ್ಲಿ ಸರಳ ವಿವಾಹ ಯೋಜನೆಯಡಿ ಅರ್ಜಿ ಸಲ್ಲಿಸಿದ ಒಟ್ಟು 111 ಜೋಡಿಗಳ ವಿವಾಹ ಕಾರ್ಯಕ್ರಮವು ದಿನಾಂಕ:18.01.2026 ರಂದು ನಡೆಯಿತು.**

ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ 111 ಜೋಡಿಗಳಿಗೆ ಪ್ರತಿ ಜೋಡಿಗೆ 50000 ರೂ. ಮತ್ತು ಸಾಮೂಹಿಕ ವಿವಾಹಗಳನ್ನು ಏರ್ಪಡಿಸಿರುವ ಆಯೋಜಕರುಗಳಿಗೆ ಪ್ರೋತ್ಸಾಹ ಹಾಗೂ ವಿವಾಹದ ಖರ್ಚು–ವೆಚ್ಚಗಳಿಗಾಗಿ ಪ್ರತಿ ಜೋಡಿಗೆ 5000 ರೂ.ಗಳನ್ನು ನೀಡಲಾಗುವುದು. ಹಾಗೂ ಜಿಲ್ಲೆಗೆ ಈ ಯೋಜನೆಯಡಿ ಪ್ರಸ್ತುತ 200 ಫಲಾನುಭವಿಗಳಿಗೆ ಭೌತಿಕ ಗುರಿಯನ್ನು ನಿಗಧಿಪಡಿಸಲಾಗಿದ್ದು, ಅರ್ಹ ಅಲ್ಪಸಂಖ್ಯಾತ ಸಮುದಾಯದ ಫಲಾನುಭವಿಗಳು ಅರ್ಜಿ ಸಲ್ಲಿಸಿ ಸದುಪಯೋಗಪಡಿಸಿಕೊಳ್ಳಬಹುದಾಗಿದೆ. ಈ ಕಾರ್ಯಕ್ರಮದಲ್ಲಿ ಸಚಿವರು, ಶಾಸಕರು ಹಾಗೂ ಇತರೆ ರಾಜಕೀಯ ಮುಖಂಡರು, ಗಣ್ಯರು ಹಾಗೂ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳು ಮತ್ತು ದಾರುಸ್ಸಲಾಮ್ ಫೌಂಡೇಷನ್ ಟ್ರಸ್ಟ್ ಮಾನವಿ, ಈ ಸಂಸ್ಥೆಯ ಅಧ್ಯಕ್ಷರು/ಕಾರ್ಯದರ್ಶಿಗಳು ಉಪಸ್ಥಿತರಿದ್ದರು.

ಸೂಚನೆ: ಅರ್ಜಿ ಸಲ್ಲಿಸುವ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಆನ್‌ಲೈನ್‌ನಲ್ಲಿ ನಡೆಸಲಾಗುತ್ತಿದ್ದು, ಅದಾಗ್ಯೂ ಕೆಲವು ಸ್ವಯಂ ಸೇವೆ ಸಂಸ್ಥೆಗಳು ಮತ್ತು ಅರ್ಜಿದಾರರು ತಾಂತ್ರಿಕ ಕಾರಣಗಳಿಂದ ಆನ್‌ಲೈನ್ ಅರ್ಜಿಯನ್ನು ಸಲ್ಲಿಸಲು ತೊಂದರೆ ಉಂಟಾದಲ್ಲಿ ಅಂತಹ ಸಂದರ್ಭದಲ್ಲಿ ಮಾತ್ರ ಅನುಮೋದಿತ ಆಫ್‌ಲೈನ್ ಅರ್ಜಿ ನಮೂನೆಗಳನ್ನು ಜಿಲ್ಲಾ/ತಾಲ್ಲೂಕು ಕಚೇರಿಯಿಂದ ಪಡೆದು ಸಲ್ಲಿಸುವಂತೆ ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮಾಹಿತಿ ಕೇಂದ್ರ: ರಾಯಚೂರು 9731028420, ದೇವದುರ್ಗ 9148233616, ಲಿಂಗಸುಗೂರು 9886447863, ಮಾನವಿ 887334758 ಹಾಗೂ ಸಿಂಧನೂರು 8217621732ಗೆ ಸಂಪರ್ಕಿಸಬಹುದಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರ

## ಮಸ್ಕಿ ಸಾರಿಗೆ ಘಟಕದಲ್ಲಿ ಚಾಲಕರ ದಿನಾಚರಣೆ ಕಾರ್ಯಕ್ರಮಕ್ಕೆ ಆರ್. ಸಿದ್ದನಗೌಡ ಚಾಲನೆ

❑ ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಪ್ರತಿನಿತ್ಯ ಸಾವಿರಾರು ಪ್ರಯಾಣಿಕರಿಗೆ ಸುರಕ್ಷಿತವಾಗಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ತಲುಪಿಸಲು ಶ್ರಮಿಸುವ ಚಾಲಕರ ಪರಿಶ್ರಮ ಅತ್ಯಂತ ಕಠಿಣ ವಾದದ್ದು ಎಂದು ಮಸ್ಕಿ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಆರ್. ಸಿದ್ದನಗೌಡ ತುರ್ವಿಹಾಳ ಹೇಳಿದರು.**

ಮಸ್ಕಿ ಪಟ್ಟಣದಲ್ಲಿರುವ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಸಾರಿಗೆ ಘಟಕದಲ್ಲಿ ಶನಿವಾರ ಚಾಲಕರ ದಿನಾಚರಣೆ ಕಾರ್ಯಕ್ರಮದಲ್ಲಿ ಚಾಲಕರಿಗೆ ಹೂ ನೀಡಿ ಸ್ವಾಗತಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು ಪ್ರಯಾಣಿಕರ




ಸುರಕ್ಷತೆ ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ವಾಗಿ ನಿಮ್ಮ ಆರೋಗ್ಯವನ್ನು ನೀವು ಕಾಪಾಡಿಕೊಳ್ಳಬೇಕು ಚಾಲಕರ ಸೇವೆಯನ್ನು ಗುರುತಿಸಿ ಗೌರವಿಸಲು ಆದ್ದರಿಂದ ಸರ್ಕಾರ ಚಾಲಕರ ದಿನಾಚರಣೆ ಆಚರಿಸಲಾಗುತ್ತದೆ ಎಂದರು. ರಸ್ತೆ ಸುರಕ್ಷತೆಯ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಚಾಲಕರನ್ನು ಪ್ರೋತ್ಸಾಹಿಸಲು ಹಾಗೂ ಚಾಲಕರಿಗೆ ಸೇವೆಗೆ ಗೌರವ ಸಲ್ಲಿಸಲು ಈ ದಿನವನ್ನು ಆಚರಿಸಲಾಗುತ್ತದೆ, ಹಗಲು ರಾತ್ರಿ ಎನ್ನದೆ ಸೇವೆ ಸಲ್ಲಿಸುವ ಚಾಲಕರಿಗೆ ಶುಭ ಹಾರೈಸಿದರು.

ನಂತರ ಡಿಪೋ ವ್ಯವಸ್ಥಾಪಕ ಆದ–ಪ್ಪ ಮಾತನಾಡಿ ಚಾಲಕರಿಗೆ ನೈತಿಕ ಸ್ಥೆರ್ಯ ತುಂಬುವ ಹಾಗೂ ಅವರ ಜವಾಬ್ದಾ–ರಿಯುತ ಸೇವೆಯನ್ನು ಗೌರವಿಸುವ ಉದ್ದೇಶದಿಂದ ಜನವರಿ 24ರಂದು ಚಾಲಕರ ದಿನ ಆಚರಣೆ ಮಾಡಲಾಗುತ್ತಿದ್ದು, ಪ್ರಯಾಣಿಕರ ಸುರಕ್ಷತೆಯೊಂದಿಗೆ ಪ್ರಯಾಣಿಕರ ನಂಬಿಕೆ ಗಳಿಸಿ, ಸೇವೆ ಸಲ್ಲಿಸುತ್ತಿರುವ ಚಾಲಕರ ಕಾರ್ಯ ಅತ್ಯಂತ ಮಹತ್ವದ್ದಾಗಿದ್ದು,ಅವರ ಕಾರ್ಯ ಜವಾಬ್ದಾರಿಯುತ ಮತ್ತು ಗೌರವಯುತ ಸೇವೆಯಾಗಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ , ಗ್ಯಾರಂಟಿ ಸಮಿತಿ ಅಧ್ಯಕ್ಷ ಮೈಬುಸಾಬ್ ಮುದ್ದಾಪುರ, ಪುರಸಭೆ ಮುಖ್ಯಾಧಿಕಾರಿ ನರಸರಡ್ಡಿ, ಗ್ಯಾರಂಟಿ ಸದಸ್ಯ ಅಸ್ಲಾಂ ಪಾಷಾ, ನಾಗರತ್ನ ಕಟ್ಟಿಮನಿ , ಸಿಬ್ಬಂದಿ ಮೆಲ್ವಿಚಾರಕ ವಿರೇಶ್, ಲೆಕ್ಕ ಪತ್ರ ಮೆಲ್ವಿಚಾರಕ ಜಿಲಾನಿ, ಸಂಚಾರ ನಿರೀಕ್ಷಕ ನಾಗರಾಜ, ಕಿರಿಯ ಸಹಾಯಕ ನರಸಿಂಹ, ಚಾಲಕರಾದ ಹುಸೇನ ಪಾಷಾ,ರಫೀ, ಶರಣಪ್ಪ ಇದ್ದರು.

## ನಿಮ್ಮ ಸುರಕ್ಷತೆ ನಮ್ಮ ಸುಭದ್ರತೆ ವಿವಾಹ ಆಮಂತ್ರಣ ಪತ್ರಿಕೆಯಲ್ಲಿಯೂ ಸಾಮಾಜಿಕ ಕಳಕಳಿಗೆ ಮುಂದಾದ ಪೊಲೀಸ್ ಪೇದೆ




❑ ನೈಜ್ಯ ದೆಸೆ ನ್ಯೂಸ್

**ಕವಿತಾಳ: ಮುದುಗಲ್ ಪಟ್ಟಣದ ಜಲ್ಲಿ ಕುಟುಂಬದ ವಿವಾಹ ಆಮಂತ್ರಣ ಪತ್ರಿಕೆಯಲ್ಲಿ ಸಾರ್ವಜನಿಕರ ಸುರಕ್ಷತೆ ಮತ್ತು ಭದ್ರತೆ ಕು–ರಿತು ಅರಿವು ಮೂಡಿಸುವ ಮತ್ತು ಕಾನೂನಿನ ಪಾಲನೆಗೆ ಮುಂದಾಗಿರುವ ಪೊಲೀಸ್ ಪೇದೆ ಸುರೇಶ್ ಜಲ್ಲಿ ಅವರ ಕಾರ್ಯ ಶ್ಲಾಘನೀಯ.**


ಫೆಬ್ರುವರಿ 8ರಂದು ಪೊಲೀಸ್ ಪೇದೆ ಸುರೇಶ್ ಜಲ್ಲಿ ಮತ್ತು ಅವರ ಸಹೋದರ ಸಂಗಮೇಶ್ ಜೆಲ್ಲಿ ಅವರ ವಿವಾಹವು ಮುದಗಲ್ ಪಟ್ಟಣದ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಇದ್ದು ವಿವಾಹ ಆಮಂತ್ರಣ ಪತ್ರಿಕೆಯಲ್ಲಿ ರಾಯಚೂರು ಜಿಲ್ಲಾ ಪೊಲೀಸ್ "ನಿಮ್ಮ ಸುರಕ್ಷತೆ ನಮ್ಮ ಸುಭದ್ರತೆ" ಎನ್ನುವ ಶೀರ್ಷಿಕೆಯಡಿ ಕಾನೂನು ಅರಿವು ಮೂಡಿಸಲು ಮುಂದಾಗಿದ್ದು. ಅಪರಿಚಿತ ರಿಂದ ಬರುವ ಸಂಶಯಾಸ್ಪದ ಲಿಂಕ್ ಗಳನ್ನು ಕ್ಲಿಕ್ ಮಾಡಬೇಡಿ, ನಿಮ್ಮ ಬ್ಯಾಂಕ್ ಒಟಿಪಿ ಅಥವಾ ಪಿನ್ ಸಂಖ್ಯೆಯನ್ನು ಯಾರಿಗೂ ನೀಡಬೇಡಿ, ಆನ್ಲೈನ್ ವಂಚನೆಗೆ ಒಳಗಾದರೆ ತಕ್ಷಣ1930 ಸಂಖೆಗೆ ಕರೆ ಮಾಡಿ, ವಾಹನ ಚಾಲನೆ ಮಾಡುವಾಗ ಕಡ್ಡಾಯವಾಗಿ ಹೆಲ್ಮೆಟ್ ಮತ್ತು ಸೀಟ್ ಬೆಲ್ಟ್ ಧರಿಸಬೇಕು, ಮದ್ಯಪಾನ ಮಾಡಿ ವಾಹನ ಚಲಾಯಿಸಬೇಡಿ, ವೇಗದ ಮಿತಿ ಮೀರಬೇಡಿ, ದ್ವಿಚಕ್ರ ವಾಹನದಲ್ಲಿ ಮೂರು ಜನ ಪ್ರಯಾಣ ಮಾಡಬೇಡಿ ಹಾಗೂ ತುರ್ತು ಸಂದರ್ಭದಲ್ಲಿ ಸಹಾಯಕ್ಕಾಗಿ 112 ಸಹಾಯವಾಣಿಗೆ ಕರೆ ಮಾಡಿ ಎನ್ನುವ ಪೊಲೀಸ್ ಇಲಾಖೆಯ ನಿಯಮ ಮತ್ತು ನಿಬಂಧನೆಗಳನ್ನು ಹಾಕುವ ಮೂಲಕ ತಮ್ಮ ವಿವಾಹ ಆಮಂತ್ರಣ ಪತ್ರದಲ್ಲಿಯೂ ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯ ಮೆಚ್ಚುವಂತದ್ದು ಎಂದು ವಿವಾಹ ಆಮಂತ್ರಣ ಪಡೆದಿರುವ ಸ್ನೇಹಿತರನ್ನು ಅಂಬೋಣವಾಗಿದೆ.

## ಮಗಳ ಶಿಕ್ಷಣಕ್ಕಾಗಿ ಅನಾರೋಗ್ಯ ತಂದೆಗೆ ಆಸರೆಯಾದ ಕಾರುಣ್ಯಾಶ್ರಮ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಲಿಂಗಸೂಗೂರು ಸಾರಿಗೆ ಇಲಾಖೆಯಲ್ಲಿ ಸುಮಾರು ವರ್ಷಗಳ ಕಾಲ ಸೇವೆ ಸಲ್ಲಿಸಿ ಎರಡು ಅತ್ಯುತ್ತಮ ಪ್ರಶಸ್ತಿಯನ್ನು ಸ್ವೀಕ–ರಿಸಿದ್ದ ಅನಾರೋಗ್ಯ ಪೀಡಿತ ಈರಪ್ಪ ವಯಸ್ಸು –54 ಇವರ ಧರ್ಮಪತ್ನಿ ಮರಣ ಹೊಂದಿದ್ದು ಇವರ ಮಗಳಾದ ಭಾಗ್ಯಶ್ರೀ ತುಮಕೂರಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಅಂಶವನ್ನು ಗಮನಿಸಿ ಸಿಂಧನೂರು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಶ್ರೀಮಠ ಸೇವಾ ಟ್ರಸ್ಟ್ (ರೀ) ಹರೇಟನೂರು.**

ಕಾರುಣ್ಯನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದ ಸಂಸ್ಥಾಪಕರಾದ ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ ಕರಡಕಲ್ ಅವರು ತಮ್ಮ ಆಶ್ರಮಕ್ಕೆ ಕರೆತಂದು ಮಾನವೀಯತೆ ದೃಷ್ಟಿಯಿಂದ ಮತ್ತು ಭಾಗ್ಯಶ್ರೀ ಅವರ ಶೀಕ್ಷಣಕ್ಕೆ ತೊಂದರೆ ಆಗಬಾರದು ಎನ್ನುವ ಹಿತದೃಷ್ಟಿಯನ್ನು ಇಟ್ಟುಕೊಂಡು ಆಶ್ರಯ ಕೊಟ್ಟು ಆಸರೆಯಾದರು. ಈ ಸಂದರ್ಭದಲ್ಲಿ ಆಶ್ರಮದ ಸೇವಾಕರ್ತರಾದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸಯ್ಯಸ್ವಾಮಿ





ಹಿರೇಮಠ ಮಾತನಾಡಿ ಇಂದು ನಮ್ಮ ಅಶ್ರಮದ ಒಡೆಯರಾದ ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ ಅವರು ಈರಪ್ಪ ಅವರ ಮಗಳ ವ್ಯಾಸಂಗಕ್ಕೆ ತೊಂದರೆ ಆಗಬಾರದು ಎನ್ನುವ ದೃಷ್ಟಿಯನ್ನು ಇಟ್ಟುಕೊಂಡು ಈ ರೀತಿಯ ಸೇವೆಗೆ ನಮಗೆ ಅವಕಾಶ ಕಲ್ಪಿಸಿ ಕೊಟ್ಟಿರುವುದು ನಮಗೆ ಆತ್ಮ ತೃಪ್ತಿ ತಂದಿದೆ.

ತಾಯಿ ಇಲ್ಲದೆ ತಂದೆಯ ಈ ಅನಾರೋಗ್ಯ ಸ್ಥಿತಿಯಲ್ಲಿ ಈ ಕ್ಷಣವನ್ನೆ ತೊರೆಯುವಂತಹ ಸಹೋದರಿಗೆ ನಾವು ನೆರವಾಗುವುದು ನಮ್ಮ ಆದ್ಯ ಕರ್ತವ್ಯ ಈರಪ್ಪ ಅವರ ಇನ್ನೂ ಆರು ವರ್ಷಗಳ ಸೇವೆ ಇದ್ದರೂ ಸಹ ಅನಾರೋಗ್ಯ ಸ್ಥಿತಿಯಿಂದಾಗಿ ಅವರು ಬಳಲುತ್ತಿರುವುದು ಮತ್ತು ಅವರಿಗೆ ಇರುವ ಇಬ್ಬರು ಚಿಕ್ಕ ಮಕ್ಕಳಿಗೆ ಮುಂದಿನ ದಿನಮಾನಗಳಲ್ಲಿ ಶಿಕ್ಷಣಕ್ಕೆ ನಾವು ಸಹಾಯ ಸಹಕಾರ ನೀಡುತ್ತೇವೆ ಎಂದು ನಮ್ಮ ಸಂಸ್ಥಾಪಕರು ಭರವಸೆ ಕೊಟ್ಟಿರುವುದು ಸಮಾಜ–ಕ್ಕೆ ಮಾದರಿಯದಂತಹ ವಿಚಾರ ಬರೀ ನೆಲೆ ಇಲ್ಲದ ಜೀವಿಗಳನ್ನಷ್ಟೇ ಕಾಪಾಡುವುದಷ್ಟೇ ನಮ್ಮ ಉದ್ದೇಶ ಅಲ್ಲ ಇಂತಹ ಗಂಭೀರ ಪರಿಸ್ಥಿತಿಯಲ್ಲಿ ಈ ಮಕ್ಕಳಿಗೆ ಆಸರೆಯಾಗಬೇಕು ಎನ್ನುವ ಉದ್ದೇಶ ನಮ್ಮೆಲ್ಲರದ್ದು ಎನ್ನುವ ವಿಚಾರವನ್ನು ಇಟ್ಟುಕೊಂಡ ಮಲ್ಲಿಕಾರ್ಜುನ ಸ್ವಾಮಿಯವ–ರಿಗೆ ನಾನು ವೈಯಕ್ತಿಕವಾಗಿ ಧನ್ಯವಾದಗಳು ಅರ್ಪಿಸುತ್ತಿದ್ದೇನೆ ಎಂದು ಮಾತನಾಡಿದರು. ಈ ಸಮಯದಲ್ಲಿ ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ ಕರಡಕಲ್ ಸಂಸ್ಥಾಪಕರು ಹಾಗೂ ಸದಸ್ಯರು ಕಾರುಣ್ಯ ಆಶ್ರಮ ಸಿಂಧನೂರು. ಭಾಗ್ಯಶ್ರೀ ತೊಂಡಿಹಾಳ ಸಾ. ಲಿಂಗಸೂಗೂರು. ಬಸವರಾಜ ಯರವಾಳ. ಹಾಗೂ ಬೀರಣ್ಣಯಲಗಲದಿನ್ನಿ. ಶರಣಪ್ಪ ನಾಯಕ ಕಸಬಾ ಲಿಂಗಸೂಗೂರು. ಮಹೇಶ ಲಿಂಗಸೂಗೂರು. ಹಾಗೂ ಶ್ರೀಮಠ ಸೇವಾ ಟ್ರಸ್ಟ್ ನಸದಸ್ಯರಾದ ಸುಜಾತ ಹಿರೇಮಠ. ಸಿಬ್ಬಂದಿಗಳಾದ ಸುಜಾತ ಮಲದಗುಡ್ಡ .ಸಿದ್ದಯ್ಯ ಸ್ವಾಮಿ. ಮರಿಯಪ್ಪ .ಜ್ಯೋತಿ .ಅನೇಕರು ಉಪಸಿತರಿದ್ದರು.

## ತೆರಿಗೆ ತಜ್ಞರಿಗೆ ಸನ್ಮಾನ

❑ ನೈಜ್ಯ ದೆಸೆ ನ್ಯೂಸ್




**ತಾಳಿಕೋಟೆ: ಪಟ್ಟಣದ ಕನ್ನಡ ಸಂಘದ ಕಾರ್ಯಾಲಯಕ್ಕೆ ಬೇಟಿ ನೀಡಿದ ಬೆಂಗಳೂರಿನ ತೆ–ರಿಗೆ ತಜ್ಞ, ಸೃಜನಶೀಲ ಚಿಂತಕ ಡಿ. ಕಿರಣಕುಮಾರ ಅವರನ್ನು ಕನ್ನಡ ಸಂಘದ ವತಿಯಿಂದ ಶುಕ್ರವಾರ ಸನ್ಮಾನಿಸಲಾಯಿತು.**

ಸಂಘದ ಕಾರ್ಯದರ್ಶಿ ಶ್ರೀಕಾಂತ ಪತ್ತಾರ, ಸಹಕಾರ್ಯದರ್ಶಿ ಎ.ಎಂ. ಮೂಲಿಮನಿ, ದಿನಕರ ಜೋಶಿ, ಬಸನಗೌಡ ಪಾಟೀಲ, ಲೆಕ್ಕ ಪರಿಶೋಧಕ ಗಿರಿರಾಜ ಕನಕಗಿರಿ ಇದ್ದರು.

## ಹೆಚ್‌ಐವಿ/ಏಡ್ಸ್ ನಿಯಂತ್ರಣದ ಜೊತೆಗೆ ಸೋಂಕಿತರಿಗೆ ವಿವಿಧ ಇಲಾಖೆಗಳ ಸೌಲಭ್ಯಗಳ ಒದಗಿಸುವಿಕೆಗೆ ಆಧ್ಯತೆ ನೀಡಿ:ಈಶ್ವರ ಕಾಂದೂ

❑ ನೈಜ್ಯ ದೆಸೆ ನ್ಯೂಸ್

**ಆಕಸ್ಮಿಕ ಘಟನೆಗಳಿಂದ ಹೆಚ್‌ಐವಿ ಸೋಂಕಿತ–ರಿಗೆ ಸಮುದಾಯದಲ್ಲಿ ಕಳಂಕ ತಾರತಮ್ಯವನ್ನು ಹೋಗಲಾಡಿಸುವ ಜೊತೆಜೊತೆಗೆ ವಿವಿಧ ಇಲಾಖೆಗಳ ಮೂಲಕ ಸಿಗುವ ಸೌಲಭ್ಯಗಳ ಒದಗಿಸುವಿಕೆಗೆ ಹೆಚ್ಚಿನ ಆಧ್ಯತೆ ನೀಡುವಂತೆ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕಾಂದೂ ತಿಳಿಸಿದರು.**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಷ್ಟ್ರೀಯ ಏಡ್ಸ್ ನಿಯಂತ್ರಣ ಕಾರ್ಯಕ್ರಮದಡಿ ಅಂತರ ಇಲಾಖೆ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ಹೆಚ್‌ಐವಿ ತಡೆಗೆ ಯುವ ಸಮುದಾಯಕ್ಕೆ ಸೋಂಕಿನಿಂದ ಉಂಟಾಗುವ ವೈಯಕ್ತಿಕ, ಸಾಮಾಜಿಕ, ಕೌಟುಂಬಿಕ ಸಮಸ್ಯೆಗಳ ಬಗ್ಗೆ ಹೆಚ್ಚಿನ ಜಾಗೃತಿ ನೀಡಲು ಮತ್ತು ಈಗಿರುವ ಸೋಂಕಿತರಿಗೆ ಎಆರ್‌ಟಿ




ಚಿಕಿತ್ಸೆ ವಿಳಂಬವಾಗದಂತೆ, ಅಗತ್ಯವುಳ್ಳವರಿಗೆ ನೆವರೋಪಿನ್ ಚಿಕಿತ್ಸೆ, ಇದರೊಂದಿಗೆ ಲಿಂಗತ್ವ ಅಲ್ಪಸಂಖ್ಯಾತರ, ಲೈಂಗಿಕ ಕಾರ್ಯಕರ್ತರ ಮಾಹಿತಿಯನ್ನು ವೈದ್ಯಕೀಯ ಕಾರಣ ಹೊರತುಪಡಿಸಿ ಗೌಪ್ಯವಾಗಿ ಇಡುವ ಮೂಲಕ ಅವರಿಗೆ ವಸತಿ ಯೋಜನೆಯಡಿ ಮನೆಗಳು, ಸಾಲ ಒದಗಿಸುವಿಕೆ, ಮನಸ್ವಿನಿ, ಮೈತ್ರಿ ಯೋಜನೆಯಡಿ ಮಾಶಾಸನ, ಉದ್ಯೋಗಿನಿ ಯೋಜನೆಯಡಿ ಸ್ವಯಂ ಉದ್ಯೋಗದ ಅರ್ಜಿಗಳನ್ನು ಆದ–್ಯತೆ ನೀಡಿ ಸೌಲಭ್ಯ ಒದಗಿಸಿ ಮುಖ್ಯವಾಹಿನಿಗೆ ತರುವ ಕಾರ್ಯ ಮಾಡುವಂತೆ ಸೂಚಿಸಿದರು.

ವಿರಳ ರಕ್ತದ ಗುಂಪುಗಳನ್ನು ಖಾಯ್ದಿರಿಸಲು ಸೂಚನೆ ಗರ್ಭಿಣಿ, ಬಾಣಂತಿಯರಿಗೆ ತುರ್ತು ಅಗತ್ಯತೆ ಹಿನ್ನಲೆಯಲ್ಲಿ ಸರಕಾರಿ ಮತ್ತು ಖಾಸಗಿ ಬ್ಲಡ್ ಬ್ಯಾಂಕ್‌ಗಳಲ್ಲಿ ನೆಗೆಟಿವ್ ಹಾಗೂ ವಿರಳ ಗುಂಪಿನ ರಕ್ತವನ್ನು ಕನಿಷ್ಠ ಒಂದು ಯುನಿಟ್ ಸಂಗ್ರಹಿಸಿಟ್ಟುಕೊಳ್ಳಲು ಸೂಚಿಸಿದರು.

ನಿಯಮಿತ ರಕ್ತದಾನ ಶಿಬಿರಗಳ ಆಯೋಜನೆಗೆ ಸೂಚನೆ: ಅಲ್ಲದೆ ನಿಯಮಿತವಾಗಿ ರಕ್ತದಾನ ಶಿಬಿರಗಳನ್ನು ಸಂಘ ಸಂಸ್ಥೆ, ಪದವಿ ಕಾಲೇಜು, ಉತ್ಸವ, ಜಾತ್ರೆಗಳಲ್ಲಿ ಆಯೋಜಿಸಿ ರಕ್ತದ ಕೊರತೆ ಜಿಲ್ಲೆಯಲ್ಲಿ ಉಂಟಾಗದಂತೆ ನಿಗಾವಹಿಸಲು ಸೂಚಿಸಿದರು. ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ ಸುರೇಂದ್ರಬಾಬು, ಜಿಲ್ಲಾ ಶಸ್ತ್ರಚಿಕಿತ್ಸಕರು ರಿಮ್ಸ್ ಆಸ್ಪತ್ರೆ ಡಾ ವಿಜಯಶಂಕರ್, ಉಪನಿರ್ದೇಶಕರು ಡಬ್ಲ್ಯುಸಿಡಿ ಇಲಾಖೆ ನವೀನ್‌ಕುಮಾರ್, ಡಿಡಿಪಿಐ ಕೆ.ಡಿ ಬಡಿಗೇರ, ಡಾ ಮಹ್ಮದ್ ಶಾಕೀರ್ ಮೊಹಿಯುದ್ದೀನ್ ಜಿಲ್ಲಾ ಕುಷ್ಟರೋಗ ನಿರ್ಮೂಲನಾಧಿಕಾರಿ, ಡಾ ನಂದಿತಾ ಎಮ್ ಎನ್ ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ, ಡಾ ಗಣೇಶ್ ಕೆ ಜಿಲ್ಲಾ ಸರ್ವೇಕ್ಷಣಾಧಿಕಾರಿ, ಡಾ ಚಂದ್ರಶೇಖರಯ್ಯ ಡಿಪಿಡಿಓ, ಡಾ ಶಿವಕುಮಾರ್ ಜಿಲ್ಲಾ ಎನ್‌ಪೋರ್ಸ್‌ಮೆಂಟ್ ಅಧಿಕಾರಿ, ಕೇಂದ್ರ ಕಾರಗೃಹದ ಅಧಿಕ್ಷಕರಾದ ಅನೀತಾ ಎಸ್ ಹಿರೇಮನಿ, ಡಿ.ಪಿ.ಸಿ.ಓ ಅಮರೇಶ, ಆಹಾರ ಇಲಾಖೆಯ ಶಿವಮೂರ್ತಿ, ವಿವಿಧ ಬ್ಲಡ್‌ಬ್ಯಾಂಕ್ ವೈದ್ಯರಾದ ಡಾ ಇಂದ್ರಾಣಿ ಕೆ, ಡಾ ಪ್ರಸನ್ನ, ಡಾ ಸಂದೀಪ್ ಕುಮಾರ್, ರಘುವರ್ಮಾ, ಡಿಯುಡಿಸಿ ಹಂಪಣ್ಣ, ಕಾರ್ಮಿಕ ಅಧಿಕಾರಿ ಆರತಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಡ್ಯಾಪ್ಕೋ ಮೇಲ್ವಿಚಾರಕ ಮಲ್ಲಯ್ಯ ಮಠಪತಿ, ಡಿವೈಹೆಚ್‌ಇಓ ಬಸಯ್ಯ, ಹೆಚ್‌ಐಓ ದೊಡ್ಡಮನಿ ಬಿಬಿ, ಎಲ್‌ಟಿಓ ಸಾಯಿರಾಬಾನು, ಮೃತ್ಯುಂಜಯ, ಎಪಡಮಲಾಜಿಷ್ಟ್ ಶ್ರೀನಿವಾಸ್, ಶಾಂತಕುಮಾರ್, ಹೊಸಬೆಳಕು ಸಂಸ್ಥೆಯ ಈರಣ್ಣ, ನಾಯಕ್, ಜ್ಞಾನಕುಮಾರಿ, ನಾಗರಾಜ ರತಕಲ್ಲ, ಹಾಗೂ ಇತರರು ಸಭೆಯಲ್ಲಿ ಭಾಗವಹಿಸಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಬಿ.ಎಸ್ಸಿ ಪರ್ಫ್ಯೂಷನ್ ಟೆಕ್ನಾಲಜಿ

ಬಿ.ಎಸ್ಸಿ ಪರ್ಫ್ಯೂಷನ್ ಟೆಕ್ನಾಲಜಿ (B.Sc Perfusion Technology) ಎಂಬುದು 3 ವರ್ಷಗಳ (6 ಸೆಮಿಸ್ಟರ್) + 6 ತಿಂಗಳ ಇಂಟರ್ನ್‌ಶಿಪ್ ಒಳಗೊಂಡ ಪೂರ್ಣ–ಸಮಯದ ಪದವಿ ಕೋರ್ಸ್ ಆಗಿದೆ. ಇದು ಹೃದಯ–ಶ್ವಾಸಕೋಶದ ಯಂತ್ರಗಳನ್ನು (Heart-Lung Machine) ನಿರ್ವಹಿಸುವ ಮತ್ತು ಶಸ್ತ್ರಚಿಕಿತ್ಸೆಯ ಸಮಯದಲ್ಲಿ ರಕ್ತಪರಿಚಲನೆಯನ್ನು ಮೇಲ್ವಿಚಾರಣೆ ಮಾಡುವ ತಜ್ಞರನ್ನು (Perfusionists) ಸಿದ್ಧಪಡಿಸುತ್ತದೆ. ಇದು ಹೃದಯ ಶಸ್ತ್ರಚಿಕಿತ್ಸೆಯ ತಂಡದ ಪ್ರಮುಖ ಭಾಗವಾಗಿದೆ. .ಬಿಎಸ್ಸಿ ಪರ್ಫ್ಯೂಷನ್ ಟೆಕ್ನಾಲಜಿ ವೈದ್ಯಕೀಯ ಕ್ಷೇತ್ರದಲ್ಲಿ ಯುಜಿ ಕೋರ್ಸ್ ಆಗಿದೆ. ಇದು ಶಸ್ತ್ರಚಿಕಿತ್ಸೆಯ ಸಮಯದಲ್ಲಿ ಹೃದಯ–ಶ್ವಾಸಕೋಶದ ಯಂತ್ರವನ್ನು ನಿರ್ವಹಿಸಲು ವಿದ್ಯಾರ್ಥಿಗಳಿಗೆ ತರಬೇತಿ ನೀಡುತ್ತದೆ. ಹೃದಯ ಸ್ತಂಭನಗೊಂಡಾಗ ರೋಗಿಯ ರಕ್ತ ಪರಿಚಲನೆ ಮತ್ತು ಉಸಿರಾಟವನ್ನು ಹೇಗೆ ನಿರ್ವಹಿಸುವುದು ಎಂದು ವಿದ್ಯಾರ್ಥಿಗಳು ಕಲಿಯುತ್ತಾರೆ. ಆರೋಗ್ಯ ರಕ್ಷಣೆಯಲ್ಲಿ ಆಸಕ್ತಿ ಹೊಂದಿರುವ ಮತ್ತು ಶಸ್ತ್ರಚಿಕಿತ್ಸಾ ಕೊಠಡಿಗಳಲ್ಲಿ ಕೆಲಸ ಮಾಡಲು ಬಯಸುವವರಿಗೆ ಬಿಎಸ್ಸಿ ಪರ್ಫ್ಯೂಷನ್ ತಂತ್ರಜ್ಞಾನ ಒಳ್ಳೆಯದು. ಬಿಎಸ್ಸಿ ಪರ್ಫ್ಯೂಷನ್ ಟೆಕ್ನಾಲಜಿ ಕೋರ್ಸ್ ವಿವರಗಳು ಬಿಎಸ್ಸಿ ಕಾರ್ಡಿಯೋ ಪಲ್ಮನರಿ ಪರ್ಫ್ಯೂಷನ್ ಟೆಕ್ನಾಲಜಿಯಲ್ಲಿ, ವಿದ್ಯಾರ್ಥಿಗಳು ಹೃದಯ ಶಸ್ತ್ರಚಿಕಿತ್ಸೆಯ ಸಮಯದಲ್ಲಿ ಬಳಸುವ ಸುಧಾರಿತ ವೈದ್ಯಕೀಯ ಉಪಕರಣಗಳನ್ನು ನಿರ್ವಹಿಸುವ ಮತ್ತು ನಿರ್ವಹಿಸುವ ತರಬೇತಿಯನ್ನು ಪಡೆಯುತ್ತಾರೆ. ಬಿ.ಎಸ್ಸಿ ಪರ್ಫ್ಯೂಷನ್ ಟೆಕ್ನಾಲಜಿ – ಮುಖ್ಯಾಂಶಗಳು: ಅರ್ಹತೆ: ಪಿಯುಸಿ/10+2 ನಲ್ಲಿ ವಿಜ್ಞಾನ ವಿಷಯಗಳಾದ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಜೀವಶಾಸ್ತ್ರ (PCB) ದಲ್ಲಿ ಕನಿಷ್ಠ 50% ಅಂಕಗಳನ್ನು ಹೊಂದಿರಬೇಕು. ಕೋರ್ಸ್ ಅವಧಿ: 3 ವರ್ಷಗಳ ತರಗತಿ + 6 ತಿಂಗಳ ಕಡ್ಡಾಯ ಇಂಟರ್ನ್‌ಶಿಪ್. ಕಲಿಕಾ ವಿಷಯಗಳು: ಹೃದಯರಕ್ತನಾಳದ ಶರೀರಶಾಸ್ತ್ರ, ರೋಗಶಾಸ್ತ್ರ, ಕಾರ್ಡಿಯೋಪಲ್ಮನರಿ ಬೈಪಾಸ್, ಮತ್ತು ಯಂತ್ರ ನಿರ್ವಹಣೆ. ಉದ್ಯೋಗಾವಕಾಶಗಳು: ಆಸ್ಪತ್ರೆಗಳಲ್ಲಿ ಕಾರ್ಡಿಯಾಕ್ ಪರ್ಫ್ಯೂಷನಿಸ್ಟ್, ತಾಂತ್ರಿಕ ತಜ್ಞ, ಮತ್ತು ಆರೋಗ್ಯ ಸಲಹೆಗಾರರಾಗಿ ಕಾರ್ಯನಿರ್ವಹಿಸಬಹುದು. ಪರಿಣಿತಿ: ಓಪನ್ ಹಾರ್ಟ್ ಸರ್ಜರಿ, ಇಅಒಔ, ಖಂಃಕ, ಮತ್ತು ಐಗಿಂಆ ಗಳಂತಹ ಲೈಫ್ ಸಪೋರ್ಟ್ ಸಿಸ್ಟಮ್‌ಗಳನ್ನು ನಿರ್ವಹಿಸುವುದು.

## ಹಗರಿಬೊಮ್ಮನಹಳ್ಳಿಯಲ್ಲಿ ಚಾಲಕರ ದಿನಾಚರಣೆ

ನೈಜ್ಯ ದೆಸೆ ನ್ಯೂಸ್

**ಹಗರಿಬೊಮ್ಮನಹಳ್ಳಿ: ಇಂದು ಹಗರಿಬೊಮ್ಮನಹಳ್ಳಿ ಯ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಬಸ್ ಡಿಪೋದಲ್ಲಿ ಚಾಲಕರ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಜಿಲ್ಲಾ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಸದಸ್ಯ ಹೆಗ್ಡಳ್ ಪರಶುರಾಮ್, ಸಾರಿಗೆ ಸಂಸ್ಥೆಯ ಚಾಲಕರ ಸೇವೆ ಅತ್ಯಂತ ಶ್ರಮದಾಯಕ ಸೇವೆಯಾಗಿದ್ದು,**



ಜಗವೆಲ್ಲಾ ಮಲಗಿರಲು ಇವನೊಬ್ಬವನಿದ್ದಾ " ಎನ್ನುವ ನಾನ್ನುಡಿಯಂತೆ ಹಗಲು ರಾತ್ರಿಯೆನ್ನದೆ ಎಷ್ಟೇ ಒತ್ತಡವಿದ್ದರೂ ಟ್ರಾಫಿಕ್ ಕಿರಿಕಿರಿ ಇದ್ದರೂ ಅದನ್ನು ಲೆಕ್ಕಿಸದೆ ಸಾರ್ವಜನಿಕ ಸೇವೆ ಮಾಡುವ ಚಾಲಕರು ತುಂಬಾ ಶ್ರಮಜೀವಿಗಳು. ಹಾಗಾಗಿ ಅವರಿಗೆ ಅಧಿಕಾರಿಗಳು ಸಹ ಯಾವುದೇ ಒತ್ತಡ ನೀಡದೆ ಸರಿಯಾದ ಸಮಯಕ್ಕೆ ವಾಹನ ನೀಡುವುದರ ಜೊತೆಗೆ ಸಮಯ ಪಾಲನೆ ಮಾಡಲು ಸಹಕರಿಸಬೇಕೆಂದು ಮನವಿ ಮಾಡಿದರು.ನಂತರ ಮಾತನಾಡಿದ ಗ್ಯಾರಂಟಿ ಸಮಿತಿ ತಾಲೂಕು ಅಧ್ಯಕ್ಷ ಸೊನ್ನದ ಗುರುಬಸವರಾಜ್ ಸರ್ಕಾರದ ಪ್ರಮುಖ ಯೋಜನೆಗಳಲ್ಲಿ ಒಂದಾದ ಶಕ್ತಿ ಯೋಜನೆಯಲ್ಲಿ ಚಾಲಕ ನಿರ್ವಾಹಕರ ಶ್ರಮದಿಂದ ಇವತ್ತು ಶಕ್ತಿ ಯೋಜನೆ ವರ್ಲ್ಡ್ ರೆಕಾರ್ಡ್ ಆಗುವುದಕ್ಕೆ ಸಾಧ್ಯವಾಯಿತು. ಮತ್ತು ಚಾಲಕರಿಗೆ ನಿಮಗೂ ಕುಟುಂಬ ಇರುತ್ತೆ ಅತ್ಯಂತ ಜವಾಬ್ದಾರಿಯಿಂದ ಚಾಲನೆ ಮಾಡಿ ಸುರಕ್ಷಿತವಾಗಿ ಸಾರ್ವಜನಿಕರನ್ನು ತಲುಪಿಸಿ ಎಂದು ಮನವಿ ಮಾಡಿದರು. ನಂತರ ಮಾತನಾಡಿದ ಪುರಸಭೆ ಅಧ್ಯಕ್ಷರಾದ ಮರಿರಾಮಣ್ಣ ಅವರು, ಚಾಲಕರನ್ನು ಉದ್ದೇಶಿಸಿ ಮಾತನಾಡಿ, ನಿಮಗೆ ಚಾಲಕರು ಎನ್ನುವುದಕ್ಕಿಂತ ಸೇನಾನಿಗಳು ಎನ್ನಬಹುದು. ಯಾಕೆಂದರೆ ನೂರಾರು ಜನರ ಜೀವಾ ತಮ್ಮ ಕೈಯಲ್ಲಿರುತ್ತೆ, ಅವರನ್ನು ಸುರಕ್ಷಿತ ವಾಗಿ ಕರೆದೊಯ್ಯುವ ನೀವು ಅಭಿನಂದನೆಗೆ ಅರ್ಹರಾದವರು ಎಂದರು. ಈ ಸಂದರ್ಭದಲ್ಲಿ ಜಿಲ್ಲಾ ಗ್ಯಾರಂಟಿ ಪ್ರಾಧಿಕಾರದ ಉಪಾಧ್ಯಕ್ಷರಾದ ಜಂದಿಸಾಹೇಬ್, ತಾಲೂಕು ಸಮಿತಿ ಸದಸ್ಯರಾದ ಸರ್ದಾರ್ ರಾಮಣ್ಣ, ಗ್ಯಾರಂಟಿ ತಾಲೂಕು ಸಮಿತಿಯ ರಾಘು ಉಲವತ್ತಿ, ಡಿಪೋ ಮ್ಯಾನೇಜರ್ ಜಡೇಶ್ ಅಧಿಕಾರಿ ಸಂತೋಷ್, ಸಮಾಜ ಸೇವಕ ಸಂಚಿ ಶಿವಕುಮಾರ್ ಹಾಗೂ ಹಲವಾರು ಚಾಲಕ ನಿರ್ವಾಹಕ ಸಿಬ್ಬಂದಿ ಮಹಿಳಾ ಸಿಬ್ಬಂದಿವರ್ಗದವರು ಮತ್ತು ಸಾರ್ವಜನಿಕರು ಭಾಗವಹಿಸಿದರು.

## ಶ್ರೀಬಸವೇಶ್ವರ ಸಂಯುಕ್ತ ಪ್ರೌಢಶಾಲೆಯಲ್ಲಿ 2005–06ನೇ ಸಾಲಿನ ಎಸ್‌ಎಸ್‌ಎಲ್‌ಸಿ

# ವಿದ್ಯಾರ್ಥಿಗಳಿಂದ ಗುರುವಂದನಾ ಸ್ನೇಹಸಮ್ಮಿಲನ ಕಾರ್ಯಕ್ರಮ














ನೈಜ್ಯ ದೆಸೆ ನ್ಯೂಸ್

ಬಳಗಾನೂರು: ಪಟ್ಟಣದ ಪ್ರತಿಷ್ಠಿತ ಶ್ರೀಬಸವೇಶ್ವರ ಸಂಯುಕ್ತ ಪ್ರೌಢಶಾಲೆಯಲ್ಲಿ 2005–2006ನೇ ಸಾಲಿನ ಎಸ್‌ಎಸ್–ಎಲ್‌ಸಿ ವಿದ್ಯಾರ್ಥಿಗಳಿಂದ ಆಯೋಜಿಸಲಾದ ಗುರುವಂದನಾ ಹಾಗೂ ಸ್ನೇಹಸಮ್ಮಿಲನ ಕಾರ್ಯಕ್ರಮವು ಅರ್ಥಪೂರ್ಣವಾಗಿ ಹಾಗೂ ಸಂಭ್ರಮದಿಂದ ಜರುಗಿತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡ ಮಸ್ಕಿ ತಾಲ್ಲೂಕಿನ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು, ಪುರಾಣ–ರಚನಾಕಾರ ಹಾಗೂ ಖ್ಯಾತ ಸಾಹಿತಿಗಳಾದ ಡಾ। ಶರಭಯ್ಯಸ್ವಾಮಿ ಕಂಬಾಳಿಮಠ ಅವರು ಮಾತನಾಡಿ, ಗುರು ಶಿಷ್ಯನ ಬದುಕಿಗೆ ನೀಡುವ ಜ್ಞಾನವೆಂಬ ದೀಪವು ಜೀವಮಾನಪೂರ್ತಿ ದಾರಿದೀಪವಾಗಿರುತ್ತದೆ. ಅಜ್ಞಾನವನ್ನು ದೂರ ಮಾಡಿ ಮಾನವೀಯ ಮೌಲ್ಯಗಳನ್ನು ಬೋಧಿಸುವ ಗುರುಗಳು ಮಾತೃಸಮಾನರು ಎಂದು ಹೇಳಿದರು. ಅವರು ಮುಂದುವರೆದು, ಶಿಕ್ಷಣದ ಮಹತ್ವವನ್ನು ಅಂದಿನ ಕಾಲದಲ್ಲೇ ಅರಿತು ದೂರದೃಷ್ಟಿಯೊಂದಿಗೆ 1949ರಲ್ಲಿ ಮಾಜಿ ಸಂಸದರಾದ ಲಿಂ। ಶ್ರೀಸಿದ್ಧರಾಮೇಶ್ವರಸ್ವಾಮಿಗಳು ಶ್ರೀಬಸವೇಶ್ವರ ವಿದ್ಯಾವರ್ಧಕ ಸಂಸ್ಥೆಯ ಮೂಲಕ ಈ ಶಾಲೆಯನ್ನು ಸ್ಥಾಪಿಸಿದರು. ಇಂದು 77 ವರ್ಷಗಳನ್ನು ಪೂರೈಸಿ ಅಮೃತ ಸಂಭ್ರಮದತ್ತ ಸಾಗುತ್ತಿರುವ ಈ ಶಾಲೆ ಸಾವಿರಾರು ವಿದ್ಯಾರ್ಥಿಗಳ ಬದುಕಿಗೆ ಜ್ಞಾನದ ಬೆಳಕು ನೀಡಿದೆ ಎಂದು ಶ್ಲಾಘಿಸಿದರು. ಕಾರ್ಯಕ್ರಮವನ್ನು ಶ್ರೀಬಸವೇಶ್ವರ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಸಿದ್ದನಗೌಡ ಮಾಲಿಪಾಟೀಲ್ ಅವರು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಈ ವೇಳೆ ಶ್ರೀಬಸವೇಶ್ವರ, ಲಿಂ। ಶ್ರೀಸಿದ್ಧರಾಮೇಶ್ವರಸ್ವಾಮಿ ಹಾಗೂ ಡಾ। ಸರ್ವಪಲ್ಲಿ ರಾಧಾಕೃಷ್ಣನ್ ಅವರ ಭಾವಚಿತ್ರಗಳಿಗೆ ಪೂಜೆ ಸಲ್ಲಿಸಿ ಪುಷ್ಪಾರ್ಪಣೆ ಮಾಡಲಾಯಿತು. ಕಾರ್ಯಕ್ರಮದ ಗೌರವಾಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಕೇದಾರನಾಥಸ್ವಾಮಿ, ಅಧ್ಯಕ್ಷತೆಯನ್ನು ಶಾಲೆಯ ಮುಖ್ಯಗುರು ಅಮರನಾಥ ಹಳ್ಳೂರು ಅವರು ವಹಿಸಿದ್ದರು. ನಂತರ ಶಾಲೆಯಲ್ಲಿ ಸೇವೆ ಸಲ್ಲಿಸಿ ಅಗಲಿದ ಮುಖ್ಯಗುರುಗಳು, ಶಿಕ್ಷಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳ ಸ್ಮರಣಾಥ–ರ್ ಒಂದು ನಿಮಿಷ ಮೌನಾಚರಣೆ ನಡೆಸಿ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಪಟ್ಟಣದ ಶ್ರೀಮಾರುತಿ ದೇವಸ್ಥಾನದಿಂದ ನಿವೃತ್ತ ಹಾಗೂ ಸೇವೆಯಲ್ಲಿರುವ ಶಿಕ್ಷಕರನ್ನು ಸನ್ಮಾನಿಸಿ, ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯ ಮೂಲಕ ಶಾಲೆಗೆ ಕರೆತರಲಾಯಿತು. ಈ ಮೆರವಣಿಗೆಗೆ ಸಾರ್ವಜನಿಕ–ರಿಂದ ಉತ್ತಮ ಸ್ಪಂದನೆ ದೊರೆಯಿತು. ಸನ್ಮಾನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ: ವೇದಿಕೆಯಲ್ಲಿ ನಿವೃತ್ತ ಶಿಕ್ಷಕರು, ಸೇವೆಯಲ್ಲಿರುವ ಶಿಕ್ಷಕರು, ಪತ್ರಕರ್ತರು ಹಾಗೂ ಪೊಲೀಸ್ ಅಧಿಕಾರಿಗಳನ್ನು ವಿದ್ಯಾರ್ಥಿಗಳು ಸನ್ಮಾನಿಸಿ ನೆನಪಿನ ಕಾಣಿಕೆ ನೀಡಿ ಗೌರವಿಸಿದರು. ಬಳಿಕ ಹಳೆಯ ವಿದ್ಯಾರ್ಥಿಗಳು ತಮ್ಮ ಅನುಭವಗಳು ಹಾಗೂ ಅನಿಸಿಕೆಗಳನ್ನು ಹಂಚಿಕೊಂಡರು. ನಂತರ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ವಿದ್ಯಾರ್ಥಿಗಳಿಂದ ಭವ್ಯ ಗ ವಿದ್ಯಾರ್ಥಿಗಳಿಂದ ಭವ್ಯ ಗುರುವಂದನಾ ಮತ್ತು ಸ್ನೇಹ ಸಮ್ಮೇಳನ ಕಾರ್ಯಕ್ರಮವನ್ನು ಅತ್ಯಂತ ಸಂಭ್ರಮ, ಸೌಹಾರ್ದತೆ ಹಾಗೂ ನೆನಪುಗಳೊಂದಿಗೆ ಆಯೋಜಿಸಲಾಯಿತು. ಕಾರ್ಯಕ್ರಮದ ಸಂದರ್ಭದಲ್ಲಿ ಹಳೆಯ ವಿದ್ಯಾರ್ಥಿಗಳು ತಮ್ಮ ಶಾಲಾ ದಿನಗಳ ಸಿಹಿ ನೆನಪುಗಳನ್ನು ನೆನೆಸಿಕೊಂಡು ಪರಸ್ಪರ ಸಂಭಾಷಣೆ ನಡೆಸಿದರು. ಈ ವೇಳೆ ಎಲ್ಲ ವಿದ್ಯಾರ್ಥಿಗಳು ಸೇರಿ ಗ್ರೂಪ್ ಫೋಟೋ ತೆಗೆದುಕೊಳ್ಳುವ ಮೂಲಕ ಆ ಕ್ಷಣಗಳನ್ನು ಶಾಶ್ವತಗೊಳಿಸಿದರು. ಅದೇ ರೀತಿಯಾಗಿ ವಿದ್ಯಾರ್ಥಿಗಳು ತಮ್ಮ ತಮ್ಮ ಅನುಭವಗಳು, ಶಾಲಾ ಜೀವನದ ಸ್ಮರಣೀಯ ಘಟನೆಗಳು ಹಾಗೂ ಸ್ನೇಹದ ಬಾಂಧವ್ಯವನ್ನು ಹಂಚಿಕೊಂಡರು. ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಿ ಮಾಡಿದ್ದ ಫೋಟೋ ಬೂತ್‌ನಲ್ಲಿ ವಿದ್ಯಾರ್ಥಿಗಳು ಹಾಗೂ ಸ್ನೇಹಿತರು ಫೋಟೋಗಳನ್ನು ತೆಗೆದುಕೊಂಡು ಸಂತಸ ವ್ಯಕ್ತಪಡಿಸಿದರು.

ಕಾರ್ಯಕ್ರಮದ ನಿರೂಪಣೆಯನ್ನು ನವೀನ್ ಕುಮಾರ್, ನಾಗಮ್ಮ ಮತ್ತು ಸೈಯದ್ ಇಮ್ರಾನ್ ಅವರು ಸಮರ್ಪಕವಾಗಿ ನಿರ್ವಹಿಸಿ, ಕಾರ್ಯಕ್ರಮಕ್ಕೆ ಸೊಗಸಾದ ರೂಪ ನೀಡಿದರು. ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಡುವಲ್ಲಿ ಕಾರ್ಯಕಾರಿಣಿ ಸಮಿತಿಯ ಸದಸ್ಯರಾದ ರುದ್ರಗೌಡ, ರವಿಕುಮಾರ್ ಕರಡಕಲ್, ಪ್ರಭಾನಂದ ಶಾಸ್ತ್ರಿ, ನವೀನ್ ಕುಮಾರ್, ಇಮ್ರಾನ್, ಬಸವರಾಜ್ ಹಾಲಾಪುರ, ಸಂಗಣ್ಣ, ಅನಿಲ್ ಕುಮಾರ್ ಪುಟ್ಟಿ, ಸದ್ದಾಂ ಹಾದಿಮನಿ, ಪ್ರದೀಪ್ ಕುಮಾರ್ ಸಜ್ಜನ್, ಶಂಕರ್ ಕರಡಕಲ್, ವೀರೇಶ್ ಸ್ವಾಮಿ, ಕೀರ್ತಿ, ರಾಧ, ನಾಗಮ್ಮ ಸೇರಿದಂತೆ ಎಲ್ಲಾ ಸ್ನೇಹಿತರು ಮತ್ತು ಸ್ನೇಹಿತೆಯರು ಶ್ರಮವಹಿಸಿ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಯಶಸ್ವಿಗೊಳಿಸಿದರು.

ಗುರುವಂದನೆ ಹಾಗೂ ಸ್ನೇಹ ಸಮ್ಮೇಳನದ ಮೂಲಕ ಹಳೆಯ ವಿದ್ಯಾರ್ಥಿಗಳು ತಮ್ಮ ಗುರುಗಳಿಗೆ ಕೃತಜ್ಞತೆ ಸಲ್ಲಿಸುವ ಜೊತೆಗೆ, ವರ್ಷಗಳ ಬಳಿಕ ಮತ್ತೆ ಒಂದಾದ ಸ್ನೇಹ ಬಾಂಧವ್ಯವನ್ನು ಮತ್ತಷ್ಟು ಗಟ್ಟಿಗೊಳಿಸಿದರು. ಕಾರ್ಯಕ್ರಮವು ಅತ್ಯಂತ ಹೃದಯಸ್ಪರ್ಶಿಯಾಗಿ ನೆರವೇರಿತು. ವೇದಿಕೆಯಲ್ಲಿ ನಿವೃತ್ತ ಮುಖ್ಯಗುರು ವೀರಣ್ಣ ಹಂಪರಗುಂಡಿ, ನಿವೃತ್ತ ಶಿಕ್ಷಕರಾದ ಮೋತಿಲಾಲ್ ಜೈನ್, ಮಹಾಂತೇಶ ಸಾಲಿಮಠ, ಸಂಸ್ಥೆಯ ನಿರ್ದೇಶಕರಾದ ಪಂಪನಗೌಡ ಮಾಲಿಪಾಟೀಲ್, ಮೌನೇಶ್‌ಗೌಡ ಗದ್ದಿಗೌಡ್ರು, ಗೋವಿಂದರೆಡ್ಡಿಗೌಡ ಗದ್ದಿಗೌಡ್ರು, ಶೇಖರಗೌಡ ನಾಯಕ್, ಶಾಸನಗೌಡ ದಿನಸಮುದ್ರ ಸೇ–ರಿದಂತೆ ಶಾಲೆಯ ಶಿಕ್ಷಕರು ಹಾಗೂ ನಿವೃತ್ತ ಶಿಕ್ಷಕರು ಉಪಸ್ಥಿತರಿದ್ದರು.., ಶಾಂತ ಸಜ್ಜನ್ ಅವರು ಸ್ವಾಗತ ಭಾಷಣ ಮಾಡಿದರು. ರಾಧಾ ಮತ್ತು ಸಂಗಡಿಗರು ಸೊಗಸಾದ ಸ್ವಾಗತ ಗೀತೆಯನ್ನು ಹಾಡುವ ಮೂಲಕ ಕಾರ್ಯಕ್ರಮಕ್ಕೆ ಶುಭಾರಂಭ ನೀಡಿದರು. ಕಾರ್ಯಕ್ರಮದ ಕೊನೆಯಲ್ಲಿ ಶಂಕರ್ ಕರಡಕಲ್ ಅವರು ವಂದನಾರ್ಪಣೆ ಸಲ್ಲಿಸಿ, ಕಾರ್ಯಕ್ರಮಕ್ಕೆ ಸಹಕರಿಸಿದ ಎಲ್ಲ–ರಿಗೂ ಧನ್ಯವಾದಗಳನ್ನು ತಿಳಿಸಿದರು. ಇದೇ ವೇಳೆ ಸಿಕಂದರ್, ಶ್ರೀದೇವಿ ಹಾಗೂ ಕೀರ್ತಿ ಅವರು ತಮ್ಮ ಶಾಲಾ ಜೀವನದ ಸ್ಮರಣೀಯ ಅನುಭವಗಳು, ಗುರುಗಳ ಮಾರ್ಗದರ್ಶನ ಮತ್ತು ಸ್ನೇಹದ ಮಹತ್ವದ ಕುರಿತು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡು, ಕಾರ್ಯಕ್ರಮಕ್ಕೆ ಅಥ–ರ್ಪೂರ್ಣತೆಯನ್ನು ಹೆಚ್ಚಿಸಿದರು. ಕಾರ್ಯಕ್ರಮದಲ್ಲಿ ಶಾಲೆಯ ವಿದ್ಯಾರ್ಥಿಗಳು, ಪಾಲಕರು, ಪೋಷಕರು, ಹಳೆಯ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮದ ಯಶಸ್ಸಿಗೆ ಸಹಕಾರ ನೀಡಿದರು.

## ಸ್ವಾಮಿ ವಿವೇಕಾನಂದ ಆಯುರ್ವೇದ ಕಾಲೇಜಿನಲ್ಲಿ ಆಯುರ್ವೇದ ವೈದ್ಯ ವಿದ್ಯಾರ್ಥಿಗಳಿಗೆ ಷಟ್‌ಕ್ರಿಯೆಗಳ ಯೋಗಭ್ಯಾಸ ಶಿಬಿರ

ನೈಜ್ಯ ದೆಸೆ ನ್ಯೂಸ್

**ಲಿಂಗಸೂರ್: ಕೆಸರಟ್ಟಿ ಗ್ರಾಮದ ಸ್ವಾಮಿ ವಿವೇಕಾನಂದ ಆಯುರ್ವೇದ ಕಾಲೇಜಿನಲ್ಲಿ ಆಯುರ್ವೇದ ವೈದ್ಯ ವಿದ್ಯಾರ್ಥಿಗಳ ಶಾರೀರಿಕ–ಮಾನಸಿಕ ಆರೋಗ್ಯ ವೃದ್ಧಿ ಹಾಗೂ ಚಿಕಿತ್ಸಾ ಜ್ಞಾನವನ್ನು ಬೆಳೆಸುವ ಉದ್ದೇಶದಿಂದ ಷಟ್‌ಕ್ರಿಯೆಗಳ ಯೋಗಭ್ಯಾಸ ಶಿಬಿರವನ್ನು ದಿನಾಂಕ 22–01–2026 ರಂದು ಬೆಳಿಗ್ಗೆ 6:30 ರಿಂದ 7:30 ರವರೆಗೆ ಕಾಲೇಜಿನ ಆವರಣದಲ್ಲಿ ಯಶಸ್ವಿಯಾಗಿ ಹಮ್ಮಿಕೊಳ್ಳಲಾಯಿತು.**

ಯೋಗ ಉಪನ್ಯಾಸಕರಾದ ಅನ್ನದಾನಯ್ಯ ಅವರು ಶಿಬಿರವನ್ನು ನಡೆಸಿಕೊಟ್ಟು, ಮೊದಲಿಗೆ ವಿದ್ಯಾರ್ಥಿಗಳಿಗೆ ಸರಳ ಹಾಗೂ ಸುರಕ್ಷಿತ




ಪ್ರಾಣಾಯಾಮಗಳ ಅಭ್ಯಾಸವನ್ನು ಮಾಡಿಸಿದರು. ನಂತರ ಆರೋಗ್ಯದ ದೃಷ್ಟಿಯಿಂದ ಅತ್ಯಂತ ಉಪಯುಕ್ತವಾದ ಜಲನೇತಿ ಮತ್ತು ಸೂತ್ರನೇತಿ ವಿಧಾನಗಳನ್ನು ಹಂತ ಹಂತವಾಗಿ ವಿವರಿಸಿ, ಪ್ರಾಯೋಗಿಕವಾಗಿ ಅಭ್ಯಾಸ ಮಾಡಿಸಿದರು. ಈ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಕಾಲೇಜಿನ ಪ್ರಾಚಾರ್ಯರಾದ ಡಾ. ರಾಜಶೇಖರ್ ಹಿರೇಮಠ ಅವರು, ದೀರ್ಘಕಾಲದಿಂದ ಬಳಲುವ ಅಸ್ತಮಾ, ಅಲರ್ಜಿ, ಸೈನಸ್ ಹಾಗೂ ಉಸಿರಾಟ ಸಂಬಂಧಿತ ಸಮಸ್ಯೆಗಳಿಗೆ ಜಲನೇತಿ ಮತ್ತು ಸೂತ್ರನೇತಿ ಅತ್ಯುತ್ತಮ ಪರಿಹಾರ ನೀಡಬಲ್ಲವು ಎಂದು ಹೇಳಿದರು.

ಈ ಷಟ್‌ಕ್ರಿಯೆಗಳು ಕೇವಲ ಪರಂಪರ ಪದ್ಧತಿಯಲ್ಲದೆ, ವೈಜ್ಞಾನಿಕವಾಗಿ ಸಂಶೋಧಿಸಲ್ಪಟ್ಟು ಆರೋಗ್ಯಕ್ಷೇತ್ರದಲ್ಲಿ ಮಹತ್ವಪಡೆದುಕೊಂಡಿವೆ ಎಂದು ವಿದ್ಯಾರ್ಥಿಗಳಿಗೆ ವಿವರವಾದ ಮಾಹಿತಿ ನೀಡಿದರು. ಶಿಬಿರದಲ್ಲಿ ಭಾಗವಹಿಸಿದ ಎಲ್ಲಾ ಆಯುರ್ವೇದ ವೈದ್ಯ ವಿದ್ಯಾರ್ಥಿಗಳು ಜಲನೇತಿ ಹಾಗೂ ಸೂತ್ರನೇತಿ ಅಭ್ಯಾಸಗಳನ್ನು ಆತ್ಮವಿಶ್ವಾಸದಿಂದ ನಡೆಸಿ, ಅವುಗಳಿಂದ ದೊರೆತ ಸಕಾರಾತ್ಮಕ ಅನುಭವಗಳನ್ನು ಪರಸ್ಪರ ಹಂಚಿಕೊಂಡರು. ಇಂತಹ ಯೋಗಭ್ಯಾಸಗಳು ಭವಿಷ್ಯದಲ್ಲಿ ವೈದ್ಯಕೀಯ ಸೇವೆ ಸಲ್ಲಿಸುವಾಗ ರೋಗಿಗಳಿಗೆ ಸಮಗ್ರ ಚಿಕಿತ್ಸೆಯನ್ನು ನೀಡಲು ಸಹಕಾರಿಯಾಗುತ್ತವೆ ಎಂಬ ಅಭಿಪ್ರಾಯವನ್ನು ವಿದ್ಯಾರ್ಥಿಗಳು ವ್ಯಕ್ತಪಡಿಸಿದರು. ಕಾಲೇಜಿನ ವೈದ್ಯರು, ಉಪನ್ಯಾಸಕರು ಹಾಗೂ ಸಿಬ್ಬಂದಿ ವರ್ಗದವರ ಸಕ್ರಿಯ ಸಹಕಾರದಿಂದ ಈ ಷಟ್‌ಕ್ರಿಯೆಗಳ ಯೋಗಭ್ಯಾಸ ಶಿಬಿರವು ಅತ್ಯಂತ ಶಿಸ್ತುಬದ್ಧವಾಗಿ ಹಾಗೂ ಯಶಸ್ವಿಯಾಗಿ ನೆರವೇರಿತು.